ಬೆಲೆ ರೂ.2.50
D.O.P - 15th of every month at Udupi Sorting Office


ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಶ್ರೀ ಶಾರದಾ

ಮಾಸಪತ್ರಿಕೆ - 15 ಸಪ್ಟೆಂಬರ್ 2017

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-17 ಸಂಚಿಕೆ-9 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶಾರದಾ ಮಂಟಪದಲ್ಲಿ ಕಾರ್ಯಕ್ರಮಗಳ ಸರಣಿ







ಶ್ರಾವಣ ಮಾಸ ಬಂದಂತೆ ಸಂಘದ ಚಟುವಟಿಕೆಗಳು ಚುರುಕುಗೊಂಡಿವೆ. ಕಳೆದ ತಿಂಗಳು ನಾಗರಪಂಚಮಿಯನ್ನು ಆಚರಿಸಲಾಗಿತ್ತು. ಅಗೋಸ್ತು ತಿಂಗಳಲ್ಲಿ ಚೌತಿಯ ಹಿಂದಿನ ಭಾನುವಾರವು ಚಾತುರ್ಮಾಸ ನಿರತ ಶೃಂಗೇರಿ ಜಗದ್ಗುರು ಗಳನ್ನು ಭೇಟಿಯಾಗಿ ಆಶೀರ್ವಾದ ಪಡೆಯುವ ದಿನ. ಅಂತೆಯೇ ಉಡುಪಿಯಿಂದ ಸಂಘದ ವತಿಯಿಂದಲೂ ಶೃಂಗೇರಿ ಯಾತ್ರೆಗೆ ಏರ್ಪಾಡು ಮಾಡಲಾಗಿತ್ತು. ತಾ.20.08.2017 ರಂದು ಆದಿತ್ಯವಾರ ಬೆಳಗ್ಗೆ ಏಳುಗಂಟೆಗೆ ಸುಮಾರು ಎಂಬತ್ತು ಜನ ಸಮಾಜ ಬಾಂಧವರು ಬಸ್ಸು ಹಾಗೂ ಕಾರುಗಳಲ್ಲಿ ಒಟ್ಟಾಗಿ ಪ್ರಯಾಣವನ್ನು ಆರಂಭಿಸಿದರು. ಮಾರ್ಗ ಮಧ್ಯೆ ಹೆಬ್ರಿಯಲ್ಲಿ ಉಪಾಹಾರದ ಏರ್ಪಾಡು ಮಾಡಲಾಗಿತ್ತು. ಪ್ರಯಾಣ ದುದ್ದಕ್ಕೂ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣ ಹಾಗೂ ಇತರ ಭಜನೆಗಳನ್ನು ಹಾಡುತ್ತಾ ಸಮಾಜಬಾಂಧವರು ಸುಮಾರು ಹತ್ತು ಗಂಟೆಗೆ ಶೃಂಗೇರಿ ತಲುಪುವಾಗ ಅಲ್ಲಿ ಮಳೆಯಾಗುತಿತ್ತು. ಛತ್ರದಲ್ಲಿ ತುಸು ವಿರಮಿಸಿ ದೇವಸ್ಥಾನಗಳಿಗೆ ಭೇಟಿಯಿತ್ತು ಪೂಜೆ ಸಲ್ಲಿಸಿ ಗುರುಭವನದತ್ತ ಹೆಜ್ಜೆ ಹಾಕಿದರು. ಉಭಯ ಗುರುಗಳನ್ನು ಭೇಟಿಯಾಗಿ ಶಾರದಾ ಚಂದ್ರಮೌಳೀಶ್ವರರ ಪೂಜೆಯನ್ನು ವೀಕ್ಷಿಸಿದ ನಂತರ ಗುರುಗಳಿಗೆ ಶ್ರೀ ಸತ್ಯಶಂಕರ ಬೊಳ್ಳಾವರವರ ನೇತೃತ್ವದಲ್ಲಿ ಸಮಷ್ಟಿ ಭಿಕ್ಷೆ ಸಮರ್ಪಿಸಲಾಯಿತು. ಸಂಘದ ಕಾರ್ಯದರ್ಶಿ ಶ್ರೀ ಕೆ.ಸುರೇಶ್ ರಾವ್ ಮತ್ತು ಶ್ರೀಮತಿ ನಾಗವಲ್ಲಿ ದಂಪತಿಗಳು ಪಾದಪೂಜೆ ಸೇವೆಯನ್ನು ಸಂಘದ ಪರವಾಗಿ ಸಲ್ಲಿಸಿದರು. ಗುರುಗಳು ತಮ್ಮ ಸಂದೇಶದಲ್ಲಿ ಶ್ರೀ ಶಂಕರರ ಉಪದೇಶದಂತೆ ಸಕಲಜೀವರಾಶಿಗಳನ್ನು ಸಮನಾಗಿ ಕಾಣುವಂತೆಯೂ ಹಾಗೂ ಪರಸ್ಪರ ದ್ವೇಷಭಾವನೆಯನ್ನು ತ್ಯಜಿಸುವಂತೆಯೂ ತಿಳಿಸಿ ಸಮಸ್ತ ಸ್ಥಾನಿಕ ಸಮಾಜವನ್ನು ಆಶೀರ್ವದಿಸಿದರು. ನಂತರ ಎಲ್ಲರೂ ಪ್ರಸಾದಭೋಜನ ವನ್ನು ಸ್ವೀಕರಿಸಿ ಉಡುಪಿಗೆ ಹಿಂತಿರುಗಿದರು.

ತಾ. 01-09-2017 ರ ಶುಕ್ರವಾರ ಶ್ರೀ ಶಾರದಾದೇವಸ್ಥಾನದಲ್ಲಿ ಮಹಿಳಾವೇದಿಕೆಯ ವತಿಯಿಂದ ಸಾಮೂಹಿಕ ಹೂವಿನ ಪೂಜೆಯನ್ನು ದೇವಿಗೆ ಸಮರ್ಪಿಸಲಾಯಿತು. ಅಂದು ಸಂಜೆ ಮಹಿಳಾವೇದಿಕೆಯ ಸದಸ್ಯರು ಹಾಗೂ ಪರಿಸರದ ಭಕ್ತೆಯರು ಲಲಿತಾ ಸಹಸ್ರನಾಮ, ಸೌಂದರ್ಯಲಹರಿ, ಹಾಗೂ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮ ಪಾರಾಯಣವನ್ನು ಮಾಡಿದರು. ವಿವಿಧ ಭಜನೆಗಳನ್ನೂ ಹಾಡಿದರು. ದೇವಿಯನ್ನು ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು. ಸಂಜೆ ಆರುಗಂಟೆಗೆ ಮಹಾಪೂಜೆಯಾಯಿತು ಹಾಗೂ ಭಕ್ತರಿಗೆ ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯ ವಾಯಿತು. ಸುಮಾರು ನೂರೈವತ್ತು ಜನ ಭಕ್ತರು ಆಗಮಿಸಿದ್ದರು

ತಾ.04-09-2017ರ ಸೋಮವಾರ ಋಗುಪಾಕರ್ಮವನ್ನು ಶ್ರೀ ಶಾರದಾಮಂಟಪ ದಲ್ಲಿ ಪ್ರತೀ ವರ್ಷದಂತೆ ಆಚರಿಸಲಾಗಿತ್ತು. ಬೆಳಿಗ್ಗೆ ಸುಮಾರು ಹತ್ತುಗಂಟೆಗೆ ಬ್ರಹ್ಮಶ್ರೀ ನಾಗರಾಜ ಭಟ್ ಹಾಗೂ ಬ್ರಹ್ಮಶ್ರೀ ರವಿ ಉಪಾಧ್ಯಾಯರವರ ನೇತೃತ್ವದಲ್ಲಿ ಹೋಮಗಳನ್ನು ನೆರವೇರಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್.ಎಮ್. ರಾಯರು ಕರ್ತೃಗಳಾಗಿದ್ದರು. ಸುಮಾರು ಎಂಬತ್ತು ಜನ ಸಮಾಜಭಾಂದವರು ನೂತನ ಯಜ್ಞೋಪವೀತ ಧಾರಣೆ ಮಾಡಿದರು. ಅಂದು ಗಣನೀಯ ಸಂಖ್ಯೆಯಲ್ಲಿ ಬಾಲವಟುಗಳು ಭಾಗವಹಿಸಿದ್ದು ಸಮಾಜದ ಹಿರಿಯರಿಗೆ ಸಂತೋಷವನ್ನು ತಂದಿತು.

## ಕಾರ್ಕಳ ಸಂಘದ ವಾರ್ಷಿಕೋತ್ಸವ



ಶಂಕರ ಪ್ರತಿಷ್ಠಾನ (ರಿ.) ಕಾರ್ಕಳ ಇದರ ವಾರ್ಷಿಕ ಮಹಾಸಭೆಯು ದಿನಾಂಕ 30.07.2017ರ ರವಿವಾರ, ಕಾರ್ಕಳ ಶ್ರೀ ವಿಶ್ವೇಶ್ವರ ವೇಣುಗೋಪಾಲ ದೇವಸ್ಥಾನದ ಕೃಷ್ಣಕೃಪಾ ಸಭಾಭವನದಲ್ಲಿ ಸಂಭ್ರಮದಿಂದ ನೆರವೇರಿತು. ಮುಂಜಾನೆ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಮುರಲೀಧರ ಶರ್ಮರವರು ಶ್ರೀ ಶಂಕರಾಚಾರ್ಯರೆದುರು ದೀಪ ಬೆಳಗಿಸಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀಮತಿ ಸಾವಿತ್ರಿ ಮನೋಹರ್, ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಪ್ರಭಾವತಿ ಐ.ಕೆ. ಮತ್ತು ಶ್ರೀಮತಿ ಶ್ರೀಲತಾ ಶರ್ಮ ನಿರ್ವಹಿಸಿದ ಕಾರ್ಯಕ್ರಮದಲ್ಲಿ ಮಕ್ಕಳು ನೃತ್ಯ, ಏಕಾಪಾತ್ರಾಭಿನಯ ಹಾಗೂ ಯೋಗ ಪ್ರದರ್ಶಿಸಿದರೆ, ಮಹಿಳೆಯರ ಜಾನಪದ ನೃತ್ಯ ಮತ್ತು ಶ್ರೀಮತಿ ಸಾವಿತ್ರಿ ಮನೋಹರ್ ರಚಿಸಿ ನಿರ್ದೇಶಿಸಿದ, ಪುರುಷರೂ, ಮಹಿಳೆಯರೂ ಭಾಗವಹಿಸಿದ ನಾಟಕ "ನಮ್ಮ ಸಂಸಾರ" ಸಮಾಜಕ್ಕೊಂದು ಹೊಸ ಸಂದೇಶ ನೀಡುವಲ್ಲಿ ಯಶಸ್ವಿಯಾಯಿತು.

ನಂತರ ನಡೆದ ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಮುರಲೀಧರ ಶರ್ಮ ವಹಿಸಿ, ಪ್ರತಿಷ್ಠಾನದ

(4ನೇ ಪುಟಕ್ಕೆ...)



### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು,
ಉಡುಪಿ - 576 102.

**ಆಮಂತ್ರಣ**

ಮಾನ್ಯ ಸಮಾಜಬಾಂಧವರೇ,

ಸ್ವಸ್ತಿ! ಶ್ರೀ ಹೇಮಲಂಬಿ ನಾಮ ಸಂವತ್ಸರದ ಕನ್ಯಾ ಮಾಸ ದಿನ ೧೪ ಸಲುವ ಅಶ್ವಯುಜ ಶುದ್ಧ (ದಶಮಿ) ೧೦ ಯು, ತಾ.30-09-2017ನೇ ಶನಿವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ.
ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

| ಶ್ರೀ ಕೆ. ಸುರೇಶ್ ರಾವ್ | ಶ್ರೀ ಐ.ಕೆ. ಜಯಚಂದ್ರ ರಾವ್ | ಶ್ರೀ ವೈ. ಭುವನೇಂದ್ರ ರಾವ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ (ಪ್ರಭಾರ) | ಅಧ್ಯಕ್ಷರು |

ಮತ್ತು ಆಡಳಿತ ಮಂಡಳಿಯ ಸರ್ವಸದಸ್ಯರು

# ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

ಬ್ರಹ್ಮಜ್ಞಾನವನ್ನು ಪಡೆಯಬಯಸಿ, ಈ ಜ್ಞಾನಾರ್ಜನೆಗಾಗಿ ಸಕಲ ಪ್ರಯತ್ನಗಳನ್ನು ನಡೆಸುತ್ತಾ ಅದಕ್ಕೆ ಪೂರಕವಾಗಿ ಜೀವಿಸುವವನು ಬ್ರಾಹ್ಮಣ. ಸನಾತನ ಸಂಸ್ಕೃತಿಯಲ್ಲಿ ವೇದಗಳು, ಉಪನಿಷತ್ತುಗಳು ಹಾಗೂ ಪುರಾಣಗಳು ಜ್ಞಾನದ ಭಂಡಾರಗಳು. ಈ ಮೂರರಲ್ಲಿ ಕೇವಲ ಆಧ್ಯಾತ್ಮ ಮಾತ್ರವಲ್ಲ ಈ ಜಗತ್ತಿನ ಸಕಲ ವ್ಯಾಪಾರ ವಹಿವಾಟುಗಳ ವಿಚಾರವೂ ಅದರಲ್ಲಿ ಅಡಗಿದೆ. ಆಯುರ್ವೇದ, ಅರ್ಥಶಾಸ್ತ್ರ, ಶಿಲ್ಪಶಾಸ್ತ್ರ, ರಾಜಶಾಸ್ತ್ರ, ನೀತಿಶಾಸ್ತ್ರ, ಸಂಖ್ಯಾಶಾಸ್ತ್ರ, ಖಗೋಳವಿಜ್ಞಾನ ಜ್ಯೋತಿಷ್ಯ ಹೀಗೆ ಪ್ರತಿಯೊಂದು ವಿಚಾರಗಳಲ್ಲೂ ಜ್ಞಾನದ ಕಣಜ ನಮ್ಮ ಸಂಸ್ಕೃತಿಯಲ್ಲಿ ತುಂಬಿತುಳುಕುತ್ತಿದೆ. ಬ್ರಾಹ್ಮಣರು ಇಹದ ಇತರ ಐಹಿಕ ವಿಷಯಗಳಿಗೆ ಹೆಚ್ಚು ಗಮನ ಹರಿಸದೆ ಜ್ಞಾನಾರ್ಜನೆಯಲ್ಲಿಯೇ ನಿರತರಾಗಿದ್ದುದರಿಂದ ಇಂದಿಗೂ ವಿದ್ಯೆ ಬ್ರಾಹ್ಮಣರಿಗೆ ಒಲಿದಿದೆ. ಭರತಖಂಡದಾದ್ಯಂತ ನೆಲೆಸಿರುವ ಬ್ರಾಹ್ಮಣರ ಪ್ರಮುಖ ಉದ್ಯೋಗ ಇಂದಿಗೂ ಜ್ಞಾನಾಧಾರಿತವಾದ ಉದ್ಯೋಗಗಳು ಎಂದರೆ ಅತಿಶಯೋಕ್ತಿಯಲ್ಲ. ಆದರೆ ಬ್ರಾಹ್ಮಣರು ಈ ಬೃಹತ್ ದೇಶದಲ್ಲಿ ಅವರು ನೆಲೆಸಿರುವ ಭೌಗೋಳಿಕ , ರಾಜಕೀಯ ಹಾಗೂ ಧಾರ್ಮಿಕ ಪರಿಸ್ಥಿತಿಗನುಗುಣವಾಗಿ ತಮ್ಮ ಅಚಾರವಿಚಾರ, ಆಹಾರ, ಸಂಸ್ಕೃತಿಗಳಲ್ಲಿ ಅಲ್ಪಸ್ವಲ್ಪ ಭಿನ್ನತೆಗಳನ್ನು ಹೊಂದಿದ್ದಾರೆ. ಪ್ರಜಾಪ್ರಭುತ್ವದೇಶವಾಗಿ ಬದಲಾಗಿರುವ ಭಾರತದೇಶದಲ್ಲಿ ಇಂದಿಗೂ ಜಾತಿಯ ಆಧಾರದಲ್ಲಿ ಸವಲತ್ತುಗಳನ್ನು ಹಂಚುತ್ತಿರುವ ಹಿನ್ನೆಲೆಯಲ್ಲಿ ವಿಪ್ರರು ತಮ್ಮ ಆಚಾರವಿಚಾರಗಳಲ್ಲಿನ ಭೇದಗಳನ್ನು ಮರೆತು ಒಗ್ಗಟ್ಟಾಗಿದ್ದು ತಮ್ಮ ಸಂಖ್ಯಾಬಲವನ್ನು ಪ್ರದರ್ಶಿಸುವುದು ಅತ್ಯಗತ್ಯವಾಗಿದೆ.

ಅಮೇರಿಕಾದಂತಹಾ ವಿದೇಶಗಳಲ್ಲಿ ಹಾಗೂ ಮುಂಬಯಿಯಂತಹಾ ಮಹಾನಗರಿಗಳಲ್ಲಿ ನೆಲೆಸಿರುವ ಎಲ್ಲಾ ಪಂಗಡದ ಬ್ರಾಹ್ಮಣರು ಆಯಾ ಪ್ರದೇಶದ ಅನಿವಾರ್ಯತೆಗೆ ಅನುಗುಣವಾಗಿ ತಮ್ಮ ಆಚಾರವಿಚಾರಗಳನ್ನು ಬದಲಾಯಿಸಿಕೊಂಡಿರುವುದರಿಂದ ಅಲ್ಲಿ ವಾಸವಾಗಿರುವ ವಿವಿಧ ಪಂಗಡಗಳ ವಿಪ್ರಬಾಂಧವರ ಆಚಾರವಿಚಾರಗಳಲ್ಲಿ ಹೆಚ್ಚೇನು ವ್ಯತ್ಯಾಸವಿರುವುದಿಲ್ಲ. ಹಾಗಾಗಿ ಅವರಲ್ಲಿ ಏಕತೆಯ ಭಾವನೆ ಬಂದಿರುವುದು ಸಹಜಪ್ರಕ್ರಿಯೆಯಂತಿದೆ. ಆದರೆ ಕರಾವಳಿ ಜಿಲ್ಲೆಯಲ್ಲಿ ವಾಸವಾಗಿರುವ ಬ್ರಾಹ್ಮಣರಲ್ಲಿ "ಏಕತೆಯ ಅಗತ್ಯವೂ ಇದೆ, ಪ್ರತ್ಯೇಕತೆಯ ಭಾವನೆಯೂ ಇದೆ" ಎಂಬ ದ್ವಂದ್ವ ಕಾಡುತ್ತಿದೆ. ಇಲ್ಲಿ ವಿಪ್ರರ ಒಗ್ಗಟ್ಟಿನ ಮಾತು ಬಂದಾಗ ನಾವು ಇಲ್ಲಿಯ ತನಕ ಪಾಲಿಸಿಕೊಂಡು ಬಂದಿರುವ ಆಚಾರವಿಚಾರಗಳನ್ನು ಬಿಟ್ಟು ಇನ್ನೊಂದು ಆಚಾರವಿಚಾರವಿರುವ ಪಂಗಡದೊಂದಿಗೆ ವಿಲೀನವಾಗುವುದೇ ಎಂಬ ಪ್ರಶ್ನೆ ಸುಳಿಯುವುದುಂಟು. ಏಕತೆ ಹಾಗೂ ಪ್ರತ್ಯೇಕತೆಯ ಮಧ್ಯೆ ಸಮತೋಲನವನ್ನು ಸಾಧಿಸುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರವನ್ನು ಯಾರಾದರು ಕೊಡುವಿರೇ?

[ಈ ವಿಷಯದ ಮೇಲೆ ಪ್ರತಿಕ್ರಿಯೆಗಳಿಗೆ ಸ್ವಾಗತವಿದೆ]

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

**ಶ್ರೀಶಾರದಾ ಪತ್ರಿಕೆಯ ಓದುಗರಿಗೆ ನವರಾತ್ರಿ ಹಬ್ಬದ ಶುಭಾಶಯಗಳು**

## ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-25

# ಶ್ರೀ ತ್ರಿಶೂಲಿನೀ ದೇವಸ್ಥಾನ ಬಳ್ಪ, ಸುಳ್ಯ ತಾಲೂಕು




ಇಡೀ ದಕ್ಷಿಣಭಾರತದಲ್ಲೇ ತ್ರಿಶೂಲರೂಪದಲ್ಲಿ ಪೂಜಿಲ್ಪಡುತ್ತಿರುವ ದೇವಿಯ ಏಕೈಕ ದೇವಸ್ಥಾನವಿದು. ವಿಜಯನಗರ ಸಂಸ್ಥಾನದ ಆಳ್ವಿಕೆಯ ಕಾಲದಲ್ಲಿ ಕಟ್ಟಿದ ದೇವಸ್ಥಾನವಿದು. ಅಥವಾ ಅದಕ್ಕೂ ಮುಂಚೆ ಅಸ್ತಿತ್ವದಲ್ಲಿದ್ದು ವಿಜಯನಗರದ ಕಾಲದಲ್ಲಿ ಮರುನಿರ್ಮಾಣಗೊಂಡಿದ್ದರಲೂ ಇರಬಹುದು. ಐತಿಹಾಸಿಕವಾಗಿ ಸ್ಥಾನಿಕ ಬ್ರಾಹ್ಮಣರ ಹೆಮ್ಮೆಯ ದೇವಸ್ಥಾನವಿದು. ಮುಜರಾಯಿ ಇಲಾಖೆಯ ಆಡಳಿತಕ್ಕೊಳಪಟ್ಟಿದ್ದರೂ ಅನುವಂಶಿಕ ಮೊಕ್ತೇಸರರಾಗಿಯೂ ಅರ್ಚಕರಾಗಿಯೂ ನಮ್ಮವರೇ ಇದ್ದಾರೆ.

ಇಲ್ಲಿನ ಮೂಲಸ್ಥಾನ ದೇವತೆ ತ್ರಿಶೂಲವಾಗಿದ್ದು ಇದನ್ನು ಪಾಣಿಪೀಠದಲ್ಲಿ ಭದ್ರವಾಗಿ ಇರಿಸಲಾಗಿದೆ. ಪಾಣಿಪೀಠದಲ್ಲಿ ಸಿಂಹದ ಲಾಂಛನವನ್ನು ಕೆತ್ತಲಾಗಿದೆ. ದೇವಾಲಯದ ಪ್ರಾಕಾರವೂ ಶಿಲಾಮಯವಾಗಿದೆ. ಪುರಾತತ್ವ ಇಲಾಖೆಯ ವತಿಯಿಂದ ಜೀರ್ಣೋದ್ಧಾರಗೊಂಡಿರುವ ಈ ದೇವಾಲಯಕ್ಕೆ ಕಳೆದ ವರ್ಷವಷ್ಟೇ ಬ್ರಹ್ಮಕಲಶೋತ್ಸವ ನೆರವೇರಿಸಲಾಗಿದೆ. ಪಾವಂಜೆ ವಾಗೀಶ ಶಾಸ್ತ್ರಿಗಳು ಕ್ಷೇತ್ರದ ತಂತ್ರಿಗಳಾಗಿಯೂ ಶ್ರೀವತ್ಸ ಮೊರಾಜೆ ಇವರು ದೇವಳದ ಮೊಕ್ತೇಸರ ಅರ್ಚಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ದೇವಳದಲ್ಲಿ ನಿತ್ಯಪೂಜೆ, ದುರ್ಗಾಪೂಜೆ ಲಿಂಗಪೂಜೆ ಶೂಲಿನೀ ಹೋಮ ಲಲಿತಾಸಹಸ್ರನಾಮ ಹೋಮ ಇತ್ಯಾದಿಗಳು ನೆರವೇರುತ್ತವೆ. ನವರಾತ್ರಿ ಪೂಜೆ ವಿಜೃಂಭಣೆಯಿಂದ ನೆರವೇರುತ್ತದೆ. ಗಣೇಶಚತುರ್ಥಿ, ದೀಪಾವಳಿ ನಾಗಪಂಚಮಿಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ.

# ಮಹಾಪೋಷಕರಾಗಿ ಶ್ರೀ ಅಶೋಕ್ ತಂತ್ರಾಡಿ ಹಾಗೂ ಶ್ರೀಮತಿ ದೀಪಾಲಿ ಅಶೋಕ್



ಈಗಾಗಲೇ ನಮ್ಮ ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿರುವ ಬೆಂಗಳೂರಿನ ಶ್ರೀ ತಂತ್ರಾಡಿ ರಂಗರಾಯ ಶ್ಯಾನುಭೋಗ್ ಹಾಗೂ ನಳಿನಿ ಆರ್. ಶ್ಯಾನುಭೋಗ್ ಇವರ ಪುತ್ರ ಶ್ರೀ ಅಶೋಕ್ ತಂತ್ರಾಡಿ ಹಾಗೂ ಸೊಸೆ ಶ್ರೀಮತಿ ದೀಪಾಲಿ ಅಶೋಕ್ ದಂಪತಿಗಳು ಶ್ರೀ ಶಾರದಾ ಪತ್ರಿಕೆಯನ್ನು ಮೆಚ್ಚಿ ಮಹಾಪೋಷಕರಾಗಿ ಪ್ರೋತ್ಸಾಹಿಸಿದ್ದಾರೆ. ಇವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಪರವಾಗಿ ಹಾಗೂ ಶ್ರೀ ಶಾರದಾ ವೇದಿಕೆಯ ಪರವಾಗಿ ಹೃತ್ಪೂರ್ವಕವಾದ ಧನ್ಯವಾದಗಳು. ಶ್ರಿ ಅಶೋಕ್ ತಂತ್ರಾಡಿಯವರು ಬಿ.ಇ ಪದವಿಧರರಾಗಿದ್ದು ದೇಶವಿದೇಶಗಳಲ್ಲಿ ಪ್ರಖ್ಯಾತ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿದವರಾಗಿದ್ದು ಸದ್ಯ ಬ್ರಾಡ್ ಕಾಮ್ ಎಂಬ ಅಂತಾರಾಷ್ಟ್ರೀಯ ಸಂಸ್ಥೆಯಲ್ಲಿ ಅಸೋಸಿಯೇಟ್ ಡೈರಕ್ಟರ್ ಆಗಿ ಸೇವೆಸಲ್ಲಿಸುತ್ತಿದ್ದಾರೆ. ಅವರ ಪತ್ನಿ ಶ್ರೀಮತಿ ದೀಪಾಲಿ ಇವರು ಮೂಲತ: ಎಲ್ಲೂರಿನವರು. ಅವರೂ ಬಿ.ಇ ಪದವೀಧರೆ. ಶ್ರೀ ನಿಕಿಲ್ ಉಡುಪಿ ಹಾಗು ಶ್ರೀಮತಿ ವಿಮಲಾರವರ ಪುತ್ರಿ. ಇವರು ನೋಕಿಯಾ ಕಂಪೆನಿಯಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಅಶೋಕ್ ಹಾಗು ಶ್ರೀಮತಿ ದೀಪಾಲಿ ದಂಪತಿಗಳು ಬೆಂಗಳೂರಿನಲ್ಲಿ ನೆಲೆಸಿದ್ದು ಈರ್ವರು ಮುದ್ದಾದ ಮಕ್ಕಳೊಂದಿಗೆ ಸಾರ್ಥಕ ಜೀವನ ನಡೆಸುತ್ತಿದ್ದಾರೆ. ಇವರಿಗೆ ಶ್ರೀ ಶಾರದಾಪರಮೇಶ್ವರಿಯು ಅರೋಗ್ಯ ಐಶ್ವರ್ಯಾದಿ ಸಕಲ ಇಷ್ಟಾರ್ಥಗಳನ್ನು ಕರುಣಿಸಲಿ, ಇವರಿಂದ ನಮ್ಮ ಸಮಾಜಕ್ಕೆ ಇನ್ನಷ್ಟು ಸೇವೆ ಸಲ್ಲುವಂತಾಗಲಿ ಎಂದು ಹಾರೈಸುತ್ತಾ ಶ್ರೀ ಅಶೋಕ್ ಹಾಗೂ ಶ್ರೀಮತಿ ದೀಪಾಲಿ ದಂಪತಿಗಳಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
"ಗೃಹ ಸಾಲ"
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12% |
| ಹಳೆಯ ವಾಹನ | : | 13.5% |
| ಆಭರಣ ಸಾಲ | : | 12% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010-11 ರಿಂದ 2015-16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



# ಶ್ರೀಶಾರದಾ ದೇವಸ್ಥಾನ, ಶ್ರೀಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಿಧಿಂ ಕ್ರಿಯಾತ್ ॥

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ, ವಿಶೇಷ ಪೂಜೆಗಳು

ತಾ.21-09-2017ರಿಂದ 29-09-2017ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 7-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

– ಆಡಳಿತ ಮಂಡಳಿ

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗಳು

ತಾ.30-09-2017ನೇ ಶನಿವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ ಈ ಕೆಳಗಿನ ಸ್ಪರ್ಧೆಗಳು ನಡೆಯಲಿವೆ.

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| ಭಕ್ತಿಗೀತೆ ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ | 4 ನಿಮಿಷ |
| | (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | | | |
| ಚಿತ್ರರಚನೆ ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಪ್ರಕೃತಿಯ ಚಿತ್ರ-Scenery) | 5-7ನೇ ತರಗತಿಯವರೆಗೆ (ಹಕ್ಕಿ ಪ್ರಪಂಚ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯವರೆಗೆ (ಹಬ್ಬ ಅಥವಾ ಜಾತ್ರೆ) | 60 ನಿಮಿಷ |
| ರಂಗವಲ್ಲಿ ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8ನೇ ತರಗತಿಯಿಂದ ಮೇಲ್ಪಟ್ಟು ಎಲ್ಲರಿಗೂ | 60 ನಿಮಿಷ |
| | (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ-ಯಾವುದೇ ಪರಿಕರಣಗಳನ್ನು ಉಪಯೋಗಿಸಬಾರದು) | | | |
| ಶಂಖ ಊದುವುದು (ಮುಕ್ತ ಅವಕಾಶ) | ಶಂಖಗಳನ್ನು ಸ್ಪರ್ಧಿಗಳೇ ತರಬೇಕು | | | |
| ಕನಕಾಧಾರ ಸ್ತೋತ್ರ | 50 ವರ್ಷ ಮೇಲ್ಪಟ್ಟ ಮಹಿಳೆಯರಿಗೆ | | | |
| ಚೂರ್ಣಿಕೆ | ಎಲ್ಲಾ ವಯೋಮಾನದವರಿಗೆ | | | |

ವಿಶೇಷ ಸೂಚನೆಗಳು :

1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ
2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು.
3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು.
4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು.
5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

11-30ರಿಂದ ಸಭಾಕಾರ್ಯಕ್ರಮ, ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣೆ ನಡೆಯಲಿರುವುದು.

**ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ ಇವರಿಂದ ಸಭಾಕಾರ್ಯಕ್ರಮ ಮತ್ತು ಯಕ್ಷಗಾನ ''ಶನೀಶ್ವರ ಮಹಾತ್ಮೆ''**

**ಸಮಯ: ಸಂಜೆ 4-00ರಿಂದ**

-ಅಧ್ಯಕ್ಷರು, ಕಲೆ ಮತ್ತು ಸಾಂಸ್ಕೃತಿಕ ವೇದಿಕೆ

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ, ಶ್ರೀ ಬಿ. ಆನಂದ ರಾವ್ ಲಾತೂರು, ಶ್ರೀ ಬಿ. ಜಯರಾಮ ರಾವ್ ಉಡುಪಿ, ಶ್ರೀ ಮರೂರು ನಾರಾಯಣ ಹೆಬ್ಬಾರ್ ಉಡುಪಿ, ಶ್ರೀ ನಂದಳಿಕ ಕೃಷ್ಣರಾವ್ ದೊಡ್ಡಣಗುಡ್ಡೆ, ಶ್ರೀ ಅಶೋಕ್ ತಂತ್ರಾಡಿ ಬೆಂಗಳೂರು, ಶ್ರೀಮತಿ ದೀಪಾಲಿ ಅಶೋಕ್ ಬೆಂಗಳೂರು

Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


ಎಮ್. ದೇವಾನಂದ್ ಭಟ್
Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು – 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

## ಕಾರ್ಕಳ ಸಂಘದ ವಾರ್ಷಿಕೋತ್ಸವ

...1ನೇ ಪುಟದಿಂದ

ಐದು ವರ್ಷಗಳ ಸಾಧನೆಗೆ ತನಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ ಮುಂದಿನ ಪದಾಧಿಕಾರಿಗಳಿಗೂ ಸಹಕಾರ ನೀಡಿ ಪ್ರತಿಷ್ಠಾನದ ಪ್ರಗತಿಗೆ ಆಧಾರವಾಗಬೇಕೆಂದು ವಿನಂತಿಸಿದರು. ಶ್ರೀಮತಿ ಸೀತಾರತ್ನ ಮತ್ತು ಶ್ರೀಮತಿ ಅನುರಾಧಾ ಉತ್ತಮ ಶರ್ಮ ಅವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಉಪಾಧ್ಯಕ್ಷೆ ಶ್ರೀಮತಿ ಶೈಲಜಾ ರತ್ನಾಕರ್ ಸರ್ವರನ್ನೂ ಸ್ವಾಗತಿಸಿದರು. ಪ್ರತಿಷ್ಠಾನದ ಏಳಿಗೆಗಾಗಿ ತನ್ನ ಜೀವನವನ್ನು ಮುಡುಪಾಗಿಟ್ಟು, ಬದುಕಿ, ಭೌತಿಕವಾಗಿ ನಮ್ಮನ್ನಗಲಿದ ಶಶಿಧರ ಕೊಲ್ಲೆಯವರಿಗೆ ಮೌನ ಪ್ರಾರ್ಥನೆ ಸಲ್ಲಿಸಲಾಯಿತು. ಮುಖ್ಯ ಅತಿಥಿಗಳನ್ನು ನಕ್ರೆ ಶಿವರಾವ್ ಮತ್ತು ಶ್ರೀಮತಿ ವತ್ಸಲಾ ಶ್ಯಾನುಭಾಗ್ ಸಭೆಗೆ ಪರಿಚಯಿಸಿದರು. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಹಾಗೂ ಉಡುಪಿ ಜಿಲ್ಲಾ ಸ್ಥಾನಿಕ ಮಹಾಮಂಡಲದ ಉಪಾಧ್ಯಕ್ಷ ಶ್ರೀ ಗೋಪಾಲಕೃಷ್ಣ ಕೊಲ್ಲೆಯವರು ಪ್ರತಿಷ್ಠಾನದ ಸದಸ್ಯರ ಪ್ರತಿಭೆಯನ್ನು ಪ್ರಶಂಸಿಸಿದರಲ್ಲದೆ ಇಂದಿನ ಯುವಪೀಳಿಗೆ ಸುಸಂಸ್ಕೃತರಾಗಿ ಬಾಳಲು ಹಿರಿಯರು, ಸಂಘ ಸಂಸ್ಥೆಗಳ ಮಾರ್ಗದರ್ಶನ ನೀಡಬೇಕೆಂದು ನುಡಿದರು. ಇನ್ನೊರ್ವ ಮುಖ್ಯ ಅತಿಥಿ ಉಡುಪಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರದ ಹಿರಿಯ ಉಪನ್ಯಾಸಕಿ ಶ್ರೀಮತಿ ಜಾಹ್ನವಿ ಹರಿಶ್ಚಂದ್ರ ಕರ್ವಾಲುರವರು ಶ್ರೀ ಶಂಕರ ಭಗವತ್ಪಾದರ ಸರಳ ಜೀವನ ಶೈಲಿಯನ್ನು ಇಂದಿನ ಯುವಪೀಳಿಗೆ ಆದರ್ಶವನ್ನಾಗಿಟ್ಟುಕೊಂಡು ಉತ್ತಮ ಜೀವನ ನಡೆಸಬೇಕೆಂದು ಸಂದೇಶವಿತ್ತರು.

ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಕೆ. ರತ್ನಾಕರ ರಾಯರೂ, ಪರಿಶೋಧಿತ ಲೆಕ್ಕಪತ್ರವನ್ನು ಕೋಶಾಧಿಕಾರಿ ಶ್ರೀ ರಾಜಶೇಖರ ರಾಯರೂ ಮಂಡಿಸಿ ಅದನ್ನು ಸಭೆ ಅನುಮೋದಿಸಿತು. ವಿದ್ಯಾನಿಧಿಯ ಬಹುಮಾನ ವನ್ನು ನೀಡಿ ಪ್ರತಿಭಾ ಪುರಸ್ಕಾರ ಹಾಗೂ ಶ್ರೀ ಸೂರ್ಯನಾರಾಯಣ ರಾಯರು ಮತ್ತು ಶ್ರೀ ನಕ್ರೆ ಶಿವರಾಯರು ನೀಡುವ ವಿಶೇಷ ಪ್ರತಿಭಾ ಪುರಸ್ಕಾರ ನಡೆಸಲಾಯಿತು. ಪ್ರತಿಷ್ಠಾನದ ಹಿರಿಯ ಕಿರಿಯ ಸದಸ್ಯರಿಗಾಗಿ ನಡೆಸಿದ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯ್ತು. ಬಹುಮಾನ ಪ್ರಾಯೋಜಕರಾದ ಶ್ರೀಮತಿ ಸಾವಿತ್ರಿ ಮನೋಹರ್‌ಗೆ ಕೃತಜ್ಞತೆ ಸಲ್ಲಿಸಲಾಯಿತು. ಶ್ರೀ ಅನಿಲ್‌ಕುಮಾರ್ ಮತ್ತು ಶ್ರೀಮತಿ ವಸಂತಿ ಡಿ. ರಾವ್ ಸಹಕರಿಸಿದರು.

ತಮ್ಮ ವಿಶೇಷ ಪ್ರತಿಭೆಯಿಂದ ಬೇರೆ ಬೇರೆ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಗೈಡ್ ಕ್ಯಾಪ್ಟನ್ ಸಾವಿತ್ರಿ ಮನೋಹರರಿಗೆ ವಿಶೇಷ ಸನ್ಮಾನ ನೀಡಿ ಗೌರವಿಸಲಾಯ್ತು. ನಂತರ ಕರ್ವಾಲು ವಿಷ್ಣುಮೂರ್ತಿ ದೇವಸ್ಥಾನದ ನೂತನ ಆಡಳಿತ ಮುಕ್ತೇಸರ, ನಿವೃತ್ತ ಶಿಕ್ಷಕ ಶ್ರೀ ಅನಂತಪಟ್ಟಾಭಿರಾವ್ ಹಾಗೂ ಕೆಮ್ಮಣ್ಣಿನ ಶ್ರೀಮತಿ ಶಾರದಾ ಶ್ರೀನಿವಾಸ ಹೆಬ್ಬಾರರನ್ನು ಸನ್ಮಾನಿಸಲಾಯ್ತು. ಶ್ರೀಮತಿ ಸೌಮ್ಯಾ ಬಿ. ರಾವ್, ಶ್ರೀ ಹರಿಶ್ಚಂದ್ರ ಕರ್ವಾಲು ಮತ್ತು ಶ್ರೀಮತಿ ಪದ್ಮಿನಿ ಅನಿಲ್ ರಾವ್ ಕ್ರಮವಾಗಿ ಸನ್ಮಾನ ಪತ್ರ ವಾಚಿಸಿದರು. ಇದೇ ದಿನದ ಊಟ ಉಪಾಹಾರದ ಪ್ರಾಯೋಜಕರಾದ ಶ್ರೀಮತಿ ಇಂದಿರಾ ಮತ್ತು ಪ್ರೊ। ಸೂರ್ಯನಾರಾಯಣ ರಾವ್ ಮತ್ತು ಡಾ। ಶರತ್‌ಕುಮಾರ್ ಮಣಿಪಾಲ ಇವರಿಗೆ ಪುಷ್ಪ ನೀಡಿ ಗೌರವಿಸಲಾಯಿತು. ಜೊತೆ ಕಾರ್ಯದರ್ಶಿ ಶ್ರೀಮತಿ ಮಲ್ಲಿಕಾ ಹೆಬ್ಬಾರ್ ಧನ್ಯವಾದ ಸಲ್ಲಿಸಿದರು. ಶ್ರೀಮತಿ ಉಷಾ ರಾಜಶೇಖರ ರಾವ್ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಸದಸ್ಯರೆಲ್ಲರೂ ಭೂರಿ ಭೋಜನದ ಸವಿಯುಂಡು ಸಂಭ್ರಮಿಸಿದರು.

## ಜೇಡಿಮಣ್ಣು ರತ್ನಾಕರನ ಕೈಯಲ್ಲಿ ರೂಪು ತಳೆದ ಸೊಬಗು ನೋಡಾ



ದಕ್ಷಿಣ ಕನ್ನಡದ ಮೂಡುಬಿದಿರೆಯ ದೊಡ್ಮನೆ ರಸ್ತೆಯ ಶ್ರೀ ಚಂದ್ರಶೇಖರ ದೇವಾಲಯದ ಅರ್ಚಕ ಮೊಕ್ತೇಸರರಾದ ಶ್ರೀ ರತ್ನಾಕರ ರಾಯರು 1988ರಲ್ಲಿ ದೇವಾಲಯದಲ್ಲಿದ್ದ ಗಣಪತಿ ವಿಗ್ರಹ ಭಿನ್ನವಾದಾಗ ಸ್ವತಃ ಮಣ್ಣಿನ ಗಣಪತಿ ಮಾಡಿ ಅರ್ಚಿಸಲು ಪ್ರಾರಂಭಿಸಿದರು. ತರುವಾಯದ ವರ್ಷಗಳಲ್ಲಿ ಹತ್ತಿರದ ಮನೆಗಳವರು ಇವರು ರಚಿಸಿದ ವಿಗ್ರಹವನ್ನು ಕಂಡು ತಮಗೂ ನಿರ್ಮಿಸಿಕೊಡುವಂತೆ ಕೋರಿಕೊಂಡ ಪ್ರಯುಕ್ತ ಪ್ರಾರಂಭವಾಯ್ತು ಇವರ ಗಣೇಶ ವಿಗ್ರಹ ರಚನಾಕಾರ್ಯ. ಪ್ರತೀ ವರ್ಷ ಶ್ರೀ ಶೃಂಗೇರಿ ಜಗದ್ಗುರುಗಳನ್ನು ನೆನೆದು ಪ್ರಾರಂಭಿಸುತ್ತಿದ್ದ ವಿಗ್ರಹ ರಚನಾಕಾರ್ಯ ಇತಿಮಿತಿಗೆ ಅನುಗುಣವಾಗಿ ಬೆಳೆಯುತ್ತಾ ಬಂದು ಇದೀಗ ಈ ವರ್ಷ ಒಟ್ಟು 14ವಿಗ್ರಹಗಳು ರಚನೆಗೊಂಡಿವೆ. ಶ್ರೀ ರತ್ನಾಕರ ರಾಯರು ನಮ್ಮ ಮೂಡುಬಿದ್ರೆಯವರೆನ್ನುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಇವರು ರಚಿಸಿದ ಗಣೇಶನ ವಿಗ್ರಹಗಳಿಗೆ ಬಣ್ಣ ಕೊಡುವ ಕಾರ್ಯದಲ್ಲಿ ಸ್ವತಃ ಕಲೆಯಲ್ಲಿ ಆಸಕ್ತಿ ತೋರುತ್ತಿರುವ ಅವರ ಮುದ್ದಿನ ಮೊಮ್ಮಗ ಅಭಿಷೇಕ್ ಸಹಕರಿಸುತ್ತಿರುವುದನ್ನು ಅವರು ಕೊಂಡಾಡುತ್ತಾರೆ. ಈ ವರ್ಷದ ಹೆಚ್ಚಿನ ಎಲ್ಲಾ ವಿಗ್ರಹಗಳಿಗೆ ಬಣ್ಣ ನೀಡಿದ್ದು ಆತನೇ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಕಳೆದ ಎರಡು ವರ್ಷಗಳಲ್ಲಿ ಶಾರದಾ ಮಾತೆಯ ವಿಗ್ರಹವನ್ನು ಕೂಡಾ ನಿರ್ಮಿಸಿದ್ದಾಗಿ ಅವರು ಹೇಳಿದ್ದಾರೆ. ಹಿಂದಿನ ವರುಷ ಪುತ್ತಿಗೆ ಸಾರ್ವಜನಿಕ ಗಣೇಶೋತ್ಸವ ಸಮಿತಿಯಿಂದ ಸಮ್ಮಾನ ಪಡೆದ ಇವರ ಕಾರ್ಯ ಇನ್ನಷ್ಟು ಬೆಳಗಲಿ, ಉತ್ತರೋತ್ತರ ಶ್ರೇಯಸ್ಸು, ಸುಖ, ಶಾಂತಿ, ನೆಮ್ಮದಿ, ಬಾಳಲ್ಲಿ ಒದಗಲೆಂದು ಸದಾಶಯಗಳು.

**ಸಚಿತ್ರ ಲೇಖನ-ರಾಯೀ ರಾಜ್ ಕುಮಾರ್, ಮೂಡುಬಿದಿರೆ.**

# ಪಡುಬಿದ್ರಿ ಸಂಘದ ವಿವಿಧ ಕಾರ್ಯಕ್ರಮಗಳು

## ಶೃಂಗೇರಿ ಗುರುಗಳ ಭೇಟಿ

ಪ್ರತಿ ವರ್ಷದಂತೆ ಈ ಬಾರಿಯೂ ದಿನಾಂಕ 20–08–2017ನೇ ರವಿವಾರ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಪಡುಬಿದ್ರಿ ಇದರ ಸುಮಾರು 80 ಮಂದಿ ಸದಸ್ಯರು ಚಾತುರ್ಮಾಸ ಆಚರಣೆಯಲ್ಲಿರುವ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಹಾಗೂ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸನ್ನಿಧಾನಂಗಳವರ ದರ್ಶನಕ್ಕೆ ಶೃಂಗೇರಿಗೆ ತೆರಳಿದೆವು. ಆ ದಿನ ಪೂರ್ವಾಹ್ನ 7 ಗಂಟೆಗೆ ನಮ್ಮ ಸಂಘದ ಕಾರ್ಯಾಲಯದಿಂದ ಹೊರಟು ಬಜಗೋಳಿಯ ಶ್ರೀಯುತ ಉಮೇಶ್ ರಾಯರ ಮನೆಯಲ್ಲಿ ಉಪಾಹಾರವನ್ನು ಮುಗಿಸಿ ಸುಮಾರು ಗಂಟೆ 10.30ಕ್ಕೆ ಶೃಂಗೇರಿ ತಲುಪಿದೆವು. ಅಲ್ಲಿ ಮಾತೆ ಶಾರದಾಂಬೆಯ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿ ಗುರುಗಳ ದರ್ಶನಕ್ಕೆ ಗುರುಭವನಕ್ಕೆ ತೆರಳಿದೆವು. ನಮ್ಮ ಸಂಘದ ವತಿಯಿಂದ ಶ್ರೀಯುತ ಕೃಷ್ಣರಾಜ ದಂಪತಿಗಳು ಪಾದಪೂಜೆಯನ್ನು ನೆರವೇರಿಸಿದರು. ಮುಂದೆ ಯತಿದ್ವಯರ ದರ್ಶನ ಹಾಗೂ ಆಶೀರ್ವಚನ ಪಡೆದು ಅವರಿತ್ತ ಫಲ ಮಂತ್ರಾಕ್ಷತೆ ಸ್ವೀಕರಿಸಿ ಕೃತಾರ್ಥರಾದೆವು. ಶೃಂಗೇರಿ ಸಂಸ್ಥಾನದ ವತಿಯಿಂದ ಆಗಮಿಸಿದ ಎಲ್ಲಾ ಸುಮಂಗಲಿಯರಿಗೆ ಸೀರೆಯನ್ನು ನೀಡಿ, ಮಡಿಲು ತುಂಬಿಸಿ ಕಳುಹಿಸಿದ್ದು ನಮ್ಮ ಸೌಭಾಗ್ಯವೇ ಸರಿ. ರಾಜ್ಯದ ವಿವಿಧ ಸ್ಥಳಗಳಿಂದ ಆಗಮಿಸಿದ ಸಮಾಜ ಬಾಂಧವರೊಂದಿಗೆ ಕುಶಲೋಪರಿ ವಿಚಾರಿಸಿದೆವು. ಬಳಿಕ ಮಧ್ಯಾಹ್ನದ ವಿಶೇಷ ಪ್ರಸಾದ ಭೋಜನವನ್ನು ಸ್ವೀಕರಿಸಿ ನಮ್ಮ ಊರಿಗೆ ಮರಳಿದೆವು. ಸಂಜೆಯ ಉಪಹಾರವನ್ನು ಬಜಗೋಳಿಯ ಭುವನೇಶ್ವರಿ ಹೋಟೆಲಿನಲ್ಲಿ ನಡೆಸಿದೆವು. ಅಂತೂ ಸಂಘದ ಸದಸ್ಯರೆಲ್ಲಾ ಅನ್ಯೋನ್ಯವಾಗಿ ಶೃಂಗೇರಿ ಯಾತ್ರೆಯನ್ನು ಜಿನುಗುತ್ತಿರುವ ಮಳೆಯ ತಂಪಿನ ವಾತಾವರಣದಲ್ಲಿ ದಿನನಿತ್ಯದ ಕಾರ್ಯದ ಬಿಸಿಯನ್ನು ಮರೆತು ಸಂಭ್ರಮಿಸಿದೆವು.

## ಸೋಣಡೊಂಜಿ ದಿನ


ದಿನಾಂಕ 03–09–2017ನೇ ರವಿವಾರ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿಯ ಮಹಿಳಾ ವೇದಿಕೆಯ ಸದಸ್ಯೆಯರಿಂದ ಉದಯಾದ್ರಿ ಶ್ರೀ ಬಾಲಗಣಪತಿ–ಪ್ರಸನ್ನ ಪಾರ್ವತಿ ದೇವಳದ ಸಭಾಂಗಣದಲ್ಲಿ 'ಸೋಣಡೊಂಜಿ ದಿನ' ಕಾರ್ಯಕ್ರಮವು ಬಹಳ ಅದ್ದೂರಿಯಾಗಿ ನಡೆಯಿತು. ಶ್ರೀ ದೇವರಿಗೆ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಬೆಂಗಳೂರಿನ ಶ್ರೀಮತಿ ವಿಮಲಾ ಪ್ರಭಾಕರ ರಾವ್ ಇವರು ಸಭಾಧ್ಯಕ್ಷತೆ ವಹಿಸಿದ್ದರು. ಮಹಿಳಾ ವೇದಿಕೆಯ ಅಧ್ಯಕ್ಷೆಯಾದ ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಇನ್ನಾ, ಸಂಚಾಲಕಿಯಾದ ಪಡುಬಿದ್ರಿಯ ಶ್ರೀಮತಿ ಶಶಿಕಲಾ ರಾಮರಾವ್, ಮಾತೃ ಸಂಘದ ಕಾರ್ಯದರ್ಶಿ ಮುಂಡ್ಕೂರಿನ ಶ್ರೀಮತಿ ರಮ್ಯಾ ಅರುಣ್ ರಾವ್ ಮತ್ತು ನಿರ್ದೇಶಕಿ ಶ್ರೀಮತಿ ಸೀತಾದೇವಿ ಭಾಸ್ಕರ್‌ರಾವ್ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ದೀಪ ಬೆಳಗುವುದರೊಂದಿಗೆ ಕಾರ್ಯಕ್ರಮದ ಉದ್ಘಾಟನೆ ನಡೆಯಿತು.

ಶ್ರೀಮತಿ ದುರ್ಗಾಶ್ರೀ ನಾಗೇಶ್ ರಾವ್, ಎರ್ಮಾಳ್ ಇವರ ಪ್ರಾರ್ಥನೆಯ ಬಳಿಕ ಶ್ರೀಮತಿ ವೇದಾವತಿ ದಿವಾಕರ ರಾವ್ ಇವರು ಎಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಶ್ರೀಮತಿ ವೇದಾವತಿ ಲಕ್ಷ್ಮೀಕಾಂತ ರಾವ್ ಇವರು ವೇದಿಕೆಯ ಕಾರ್ಯವೈಖರಿಯ ಬಗ್ಗೆ ವಿವರಣೆ ನೀಡಿದರು. ಶ್ರೀಮತಿ ರಮ್ಯಾ ಇವರು ಸೋಣ ತಿಂಗಳ ಮಹತ್ವದ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಸಭಾ ಕಾರ್ಯಕ್ರಮದಲ್ಲಿ ಸಂಘದ ವ್ಯಾಪ್ತಿಗೆ ಒಳಪಟ್ಟ 5 ಜನ ಹಿರಿಯ ಮಾತೆಯರನ್ನು ಗೌರವಿಸಲಾಯಿತು. ಗೌರವಾನ್ವಿತರ ಪರವಾಗಿ ಶ್ರೀಮತಿ ರಾಜೇಶ್ವರಿ ಬಾಲಚಂದ್ರ ರಾವ್ ಇವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ವೇದಿಕೆಗೆ ಶುಭ ಹಾರೈಸಿದರು. ಸುರತ್ಕಲ್ ಸಂಘದಿಂದ ವೀಣಾ.ಜೆ ರಾವ್, ಕಾರ್ನಾಡ್ ಹಾಗೂ ಶ್ರೀಯುತ ಮುಕ್ಕ ಸುಕುಮಾರ ರಾವ್ ಇವರು ಪಡುಬಿದ್ರಿಯ ಸ್ಥಾನಿಕ ಬ್ರಾಹ್ಮಣ ಸಂಘವು ಇತರ ಎಲ್ಲಾ ಸಂಘಗಳಿಗೆ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀಮತಿ ವಿಮಲಾ ಪ್ರಭಾಕರ ರಾವ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹಬ್ಬಗಳ ಆಚರಣೆಯಲ್ಲಿ ಇಂದಿನ ಹಾಗೂ ಹಿಂದಿನ ವಿಧಾನಕ್ಕಿರುವ ವ್ಯತ್ಯಾಸವನ್ನು ಸ್ಮರಿಸಿದರು ಅಲ್ಲದೇ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕೊನೆಯಲ್ಲಿ ಪಡುಬಿದ್ರಿಯ ಶ್ರೀಮತಿ ಪವಿತ್ರಾ ಕೃಷ್ಣರಾವ್ ಇವರು ಎಲ್ಲರ ಸಹಕಾರವನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು. ಶ್ರೀಮತಿ ಧರ್ಮಪ್ರಭಾ ವಿದ್ಯಾರಣ್ಯ ರಾವ್ ಇವರು ಕಾರ್ಯಕ್ರಮ ನಿರೂಪಿಸಿದರು.

ಬಳಿಕ ಮಹಿಳಾ ವೇದಿಕೆಯ ಸದಸ್ಯೆಯರು ಸೋಣ ತಿಂಗಳಲ್ಲಿ ತಯಾರಿಸುವ ಸುಮಾರು 21 ಬಗೆಯ ವಿಶೇಷ ತಿಂಡಿ ತಿನಿಸುಗಳನ್ನು ತಮ್ಮ ಮನೆಗಳಲ್ಲಿ ತಯಾರಿಸಿ ಆಗಮಿಸಿದ ಸುಮಾರು 250ಕ್ಕೂ ಅಧಿಕ ಸಮಾಜ ಬಾಂಧವರಿಗೆ ಉಣಬಡಿಸಿ ಸಂತೃಪ್ತರಾದರು. ಅಂತೂ ಈ ಕಾರ್ಯಕ್ರಮವು ಬಹಳ ವೈವಿಧ್ಯಮಯವಾಗಿತ್ತು.

**ವರದಿ: ಸೀತಾದೇವಿ ಭಾಸ್ಕರ್ ರಾವ್, ನಿವೃತ್ತ ಶಿಕ್ಷಕಿ, ಪಡುಬಿದ್ರಿ.**

## ಮಿದುಳು ಕ್ಯಾನ್ಸರಿಗೆ ನ್ಯಾನೊ ಚಿಕಿತ್ಸೆ



ನ್ಯಾನೊ ತಂತ್ರಜ್ಞಾನ ಆಧಾರಿತ ಚಿಕಿತ್ಸೆಯನ್ನು ಕಂಡುಹಿಡಿದಿರುವ ತಂಡದ ಸದಸ್ಯರಾದ ಡಾ. ಬಿ.ಎಸ್.ಸತೀಶ್ ರಾವ್, ಡಾ.ಶ್ರೀನಿವಾಸ ಮುತಾಲಿಕ್, ಸಂಶೋಧನ ವಿದ್ಯಾರ್ಥಿನಿ ಡಾ.ಸುಮಾ ಪ್ರಭು, ಮಣಿಪಾಲ್ ಔಷಧ ವಿಜ್ಞಾನ ಕಾಲೇಜಿನ ಡಾ.ಎನ್.ಉಡುಪ.

ಮಿದುಳು ಕ್ಯಾನ್ಸರ್‌ಗೆ ನ್ಯಾನೊ ತಂತ್ರಜ್ಞಾನ ಆಧಾರಿತ ಚಿಕಿತ್ಸೆಯನ್ನು ಮಣಿಪಾಲ ವಿಶ್ವವಿದ್ಯಾಲಯದ ಡಾ। ಬಿ.ಎಸ್.ಸತೀಶ ರಾವ್ ನೇತೃತ್ವದ ಸ್ಕೂಲ್ ಆಫ್ ಲೈಫ್ ಸೈನ್ಸಸ್‌ನ ತಂಡ ಅವಿಷ್ಕರಿಸಿದೆ. ಮಿದುಳಿನಲ್ಲಿ ಜೀವಕೋಶಗಳ ತಡೆಗೋಡೆ ಇರುವುದರಿಂದ 'ಗ್ಲೈಯೋಬ್ಲಾಸ್ಟೊಮಾ' ಕ್ಯಾನ್ಸರ್ ಗೆಡ್ಡೆ ಬೆಳೆದಾಗ ಅದಕ್ಕೆ ಔಷಧಿ ತಲುಪಿಸಲಾಗದು. ಹೊಸ ಅವಿಷ್ಕಾರದ ಚಿಕಿತ್ಸಾ ವಿಧಾನದ ಮೂಲಕ ತಡೆಗೋಡೆಯನ್ನು ದಾಟಿ ಔಷಧ ರವಾನೆ ಸಾಧ್ಯ.

'ಮಿದುಳಿನ ಕ್ಯಾನ್ಸರ್ ಗೆಡ್ಡೆಯನ್ನು ಗುರಿಯಾಗಿಸಿ 'ಟೆಮೊಜೋಲಾಮೈಡ್' ಪ್ರತಿರೋಧಕ ಔಷಧಿಯನ್ನು ಸಾಗಿಸುವ ಬಹುಕ್ರಿಯಾತ್ಮಕ ನ್ಯಾನೊ ಕಣಗಳನ್ನು ವಿನ್ಯಾಸಗೊಳಿಸಲಾಗಿದೆ. ಇದರಲ್ಲಿ ಟ್ರಾನ್ಸ್‌ಫೆರಿನ್ ಹಾಗೂ ನೆಸ್ಟಿನ್ ಎಂಬ ಎರಡು ಪ್ರೋಟೀನ್‌ಗಳಿರುತ್ತವೆ. ಟ್ರಾನ್ಸ್‌ಫೆರಿನ್ ಜೀವಕೋಶಗಳು ತಡೆಗೋಡೆಯನ್ನು ದಾಟಲು ಸಹಾಯ ಮಾಡುತ್ತವೆ. ದಾಟಿದ ನಂತರ ನೆಸ್ಟಿನ್‌ನಲ್ಲಿರುವ ಔಷಧ ಅಲ್ಲಿ ಸ್ರವಿಸುತ್ತದೆ. ಪರಿಣಾಮ, ಕ್ಯಾನ್ಸರ್ ಗೆಡ್ಡೆಯ ಜೀವಕೋಶಗಳು ನಿರ್ಜೀವವಾಗುತ್ತವೆ' ಎಂದು ಸ್ಕೂಲ್ ಆಫ್ ಲೈಫ್ ಸೈನ್ಸಸ್‌ನ ರೇಡಿಯೇಶನ್ ಬಯಾಲಜಿ ಹಾಗೂ ಟಾಕ್ಸಿಕಾಲಜಿ ವಿಭಾಗದ ಪ್ರಾಧ್ಯಾಪಕ ಡಾ.ಬಿ.ಎಸ್.ಸತೀಶ್ ರಾವ್ ತಿಳಿಸಿರುತ್ತಾರೆ. ಡಾ.ಬಿ.ಎಸ್.ಸತೀಶ್ ರಾವ್‌ರವರು ಅಳಿಯೂರು ಬೋಳ ಸದಾಶಿವ ರಾವ್ ಹಾಗೂ ಶ್ರೀಮತಿ ಇಂದಿರಾರವರ ಪುತ್ರ.

## ಶ್ರೀ ಅನ್ನಪೂರ್ಣೇಶ್ವರೀ ದೇವಸ್ಥಾನ

**ಮುಲ್ಲಡ್ಕ, ಅಂಚೆ: ಮುಂಡ್ಕೂರು–576121, ಕಾರ್ಕಳ ತಾಲೂಕು**

ಭಕ್ತ ಮಹಾಜನರೇ,

ದಿನಾಂಕ 21–09–2017ರಿಂದ ದಿನಾಂಕ 29–09–2017ರ ವರೆಗೆ ವರ್ಷಂಪ್ರತಿ ನಡೆಯುವ

### ನವರಾತ್ರ ಮಹೋತ್ಸವವು

ಶ್ರೀದೇವಳದಲ್ಲಿ ಜರಗಲಿರುವುದು

ತಾವೆಲ್ಲರೂ ಬಂದು ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ, ಶ್ರೀ ದೇವರ ಗಂಧ ಪ್ರಸಾದ ವನ್ನು ಸ್ವೀಕರಿಸಿ, ಶ್ರೀ ಅನ್ನಪೂರ್ಣೇಶ್ವರೀ ದೇವರ ವಿಶೇಷ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ,

– **ಬಿ.ವಿ.ರಾವ್**, ಆಡಳಿತ ಮೊಕ್ತೇಸರರು, 9880201725, 9980920013.

**ಮನವಿ :** ಭಕ್ತರು ಅಕ್ಕಿ, ತೆಂಗಿನಕಾಯಿ, ತುಪ್ಪ, ಎಣ್ಣೆ, ಬೆಲ್ಲ ಅಥವಾ ಹಸಿರುವಾಣಿ ಹೊರೆಗಳನ್ನು ನೀಡಬೇಕಾಗಿ ವಿನಂತಿಸುತ್ತೇವೆ.

- ದೇವಸ್ಥಾನದ ಮೂಲಧನ (Corpus Fund)ಕ್ಕೆ ಸಹಾಯ ಮಾಡಬೇಕಾಗಿ ವಿನಂತಿ.
- ದೇವಸ್ಥಾನದಲ್ಲಿ ಪ್ರತೀ ಹುಣ್ಣಿಮೆಯಂದು ದೇವರಿಗೆ ವಿಶೇಷ ಪೂಜೆ ಹಾಗೂ ಸಮಾರಾಧನೆ ನಡೆಯುತ್ತದೆ. ಭಕ್ತರು ಭಾಗವಹಿಸಬೇಕಾಗಿ ವಿನಂತಿ.
- 04 ನವೆಂಬರ್ 2017– ದೀಪೋತ್ಸವ
  **ಸೇವಾದಾರರು: ಶ್ರೀಮತಿ ಸರಿತಾ ಮತ್ತು ಶ್ರೀ ಕಿಲಂಗೋಡಿ ರಾಮಮೋಹನ್, ಬೆಂಗಳೂರು**
- ಧನಸಹಾಯ ನೀಡುವವರು Syndicate Bank Mundkur, S.B. A/c No.-01462200004068 (IFSC No.- SYNB 0000146) ಇದಕ್ಕೆ ಕಳುಹಿಸಬೇಕಾಗಿ ವಿನಂತಿ. ಖಾತೆಗೆ ಹಣ ಕಳುಹಿಸಿದಲ್ಲಿ ದೂರವಾಣಿ ಅಥವಾ ಇ–ಮೇಲ್ ಮೂಲಕ ದಯವಿಟ್ಟು ತಿಳಿಸಬೇಕಾಗಿ ವಿನಂತಿ.

---

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ

ಉದಯಾದ್ರಿ, ಪಡುಬಿದ್ರಿ–574111. ಉಡುಪಿ ಜಿಲ್ಲೆ.

ಭಕ್ತಾಭಿಮಾನಿಗಳೇ,

ದಿನಾಂಕ 21–09–2017ರಿಂದ ದಿನಾಂಕ 29–09–2017ರ ವರೆಗೆ

**ಶ್ರೀ ಪ್ರಸನ್ನ ಪಾರ್ವತಿ ದೇವಿಯ ಸನ್ನಿಧಾನದಲ್ಲಿ**

### ಶ್ರೀ ಶರನ್ನವರಾತ್ರಿ ಮಹೋತ್ಸವವು

**ಹಾಗೂ ಪ್ರತಿ ದಿನ ರಾತ್ರಿ ಗಂಟೆ 7–00ಕ್ಕೆ**

### ವಿಶೇಷ ದುರ್ಗಾಪೂಜಾ

ಜರಗಲಿರುವುದು.

**ಆ ಪ್ರಯುಕ್ತ ತಾ.28–09–2017ನೇ ಗುರುವಾರ ದುರ್ಗಾಷ್ಟಮಿಯಂದು ಶ್ರೀ ಕ್ಷೇತ್ರದಲ್ಲಿ**

### ಚಂಡಿಕಾ ಹೋಮವು

ಸಂಪನ್ನಗೊಳ್ಳಲಿರುವುದು.

ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾ ಕಾರ್ಯಗಳಲ್ಲಿ ತಾವೆಲ್ಲರೂ ಭಾಗವಹಿಸಿ, ತನು–ಮನ–ಧನಗಳಿಂದ ಸಹಕರಿಸಿ, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಆಡಳಿತ ಮಂಡಳಿ** **ಅರ್ಚಕರು**

1. **ಶ್ರೀ ಚಂಡಿಕಾಯಾಗ ಸೇವಾ ಬಾಬ್ತು ರೂ.200/–ನ್ನು ಕೊಟ್ಟು ಯಾಗದಲ್ಲಿ ಪಾಲ್ಗೊಳ್ಳಬಹುದು.**
2. **ಬೆಳಿಗ್ಗೆ ಗಂಟೆ 11.30ಕ್ಕೆ ಯಾಗದ ಪೂರ್ಣಾಹುತಿ ಮತ್ತು ಮಧ್ಯಾಹ್ನ ಗಂಟೆ 1.00ಕ್ಕೆ ಅನ್ನಸಂತರ್ಪಣೆ.**
3. **ಶ್ರೀ ಯಾಗದ ಹತ್ತು ಜನರ ಅನ್ನಸಂಸರ್ಪಣೆಗೆ ರೂ.1,000/– ಪಾವತಿಸಿ ಸಹಕರಿಸಬೇಕಾಗಿ ವಿನಂತಿ.**
4. **ವಿಶೇಷ ದುರ್ಗಾ ಪೂಜಾ ಬಾಬ್ತು ರೂ.300/– ಪಾವತಿಸಿ ಸಹಕರಿಸಬೇಕಾಗಿ ವಿನಂತಿ.**

**ತಾರೀಕು 28–09–2017ನೇ ಗುರುವಾರ ಮಧ್ಯಾಹ್ನ 2.00 ಗಂಟೆಗೆ**

ಶ್ರೀ ದುರ್ಗಾಂಬ ಮಹಿಳಾ ಯಕ್ಷಗಾನ ಮಂಡಳಿ – ತಡಂಬೈಲು, ಸುರತ್ಕಲ್ ಇವರಿಂದ

**'ಕರ್ಣಾರ್ಜುನ'** ಯಕ್ಷಗಾನ ತಾಳಮದ್ದಳೆ ಜರಗಲಿರುವುದು.

---

ಶುಭಾಶಯಗಳೊಂದಿಗೆ

## ಹೆಬ್ಬಾರ್ ಎಂಟರ್‌ಪ್ರೈಸಸ್

**ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.**

**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**

**ಪ್ರೊ : ಮಂಜುನಾಥ ಹೆಬ್ಬಾರ್** **ಸಂಪರ್ಕ ಸಂಖ್ಯೆ 9611099894**

---

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

## ಯಶಸ್ವೀ ಎಂಟರ್‌ಪ್ರೈಸೆಸ್

**ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.**

**ಇ-ಮೇಲ್ : udayarao42@gmail.com**

**Z Gift Item Z Stationary Z Xerox Z Lamination**
**Z Spiral Binding Z Mobile & DTC Recharge Z Tours & Travels**
**Z Courier Service Z Sports Items & Toys Z Ice Creams**

---

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. –ಸಂಪಾದಕ ಮಂಡಳಿ

---

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8–00, ಮಧ್ಯಾಹ್ನ 12–00 ಹಾಗೂ ರಾತ್ರಿ 7–30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4–30ರಿಂದ

**ತಾ.08-10-2017 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-09-2017** ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ **(ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.25-09-2017** ಮತ್ತು **ತಾ.10-10-2017** ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ **9-00**ರಿಂದ ಮಧ್ಯಾಹ್ನ **12-00** ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

---

## ಬಣ್ಣದ ಸಕ್ಕಟ್ಟು ಶ್ರೀ ಲಕ್ಷ್ಮೀನಾರಾಯಣಯ್ಯ ಪ್ರತಿಷ್ಠಾನ(ರಿ.)

**ಸೌಕೂರು, ಅಂಚೆ ಗುಲ್ವಾಡಿ, ಕುಂದಾಪುರ ತಾಲೂಕು–576283.**

ದಿನಾಂಕ 15–10–2017ನೇ ರವಿವಾರ ಬೆಳಿಗ್ಗೆ

ಶ್ರೀ ದೇವರ ಸನ್ನಿಧಿಯಲ್ಲಿ **ವನದುರ್ಗಾ ಹೋಮ**

### ಸಾಂಸ್ಕೃತಿಕ ಕಾರ್ಯಕ್ರಮಗಳು

ಬೆಳಿಗ್ಗೆ ಗಂಟೆ 9–00 ರಿಂದ ನೃತ್ಯ, ಅಂಗನವಾಡಿ ಮಕ್ಕಳು ಮತ್ತು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಸೌಕೂರು ಇಲ್ಲಿನ ಮಕ್ಕಳಿಂದ

ಅಪರಾಹ್ನ ಗಂಟೆ 1–00 ರಿಂದ ಭೋಜನ

ಅಪರಾಹ್ನ ಗಂಟೆ 2–00ರಿಂದ **"ಯಕ್ಷಗಾನ ವೈಭವ"**

**ಭಾಗವತರು: ಶ್ರೀ ರಾಘವೇಂದ್ರ ಮಯ್ಯ, ಶ್ರೀ ಜಯಂತ ಕುಮಾರ್ ತೋನ್ಸೆ ಶ್ರೀ ಸುಬ್ರಹ್ಮಣ್ಯ ನಾವಡ, ಶ್ರೀ ನಾಗೇಶ ಕುಲಾಲ್, ಶ್ರೀ ಪ್ರಸಾದ ಮೊಗಬೆಟ್ಟು, ಶ್ರೀ ಚಂದ್ರಕಾಂತ ರಾವ್ ಮೂಡುಬೆಳ್ಳೆ, ಶ್ರೀ ಗುಡ್ಡಿ ಗಣೇಶ ಭಟ್ಟ,**

**ಮದ್ದಳೆ: ಶ್ರೀ ದೇವದಾಸ ರಾವ್, ಶ್ರೀ ರಾಘವೇಂದ್ರ ಹೆಗಡೆ. ಚಂಡೆ : ಶ್ರೀ ಶಿವಾನಂದ ಕೋಟ**

### "ಪಂಚಾಕ್ಷರಿ ಮಹಿಮೆ"

**ಪ್ರಸ್ತುತಿ: ಶ್ರೀ ವಿಷ್ಣುಮೂರ್ತಿ ಯಕ್ಷಗಾನ ಕಲಾ ಸಂಘ, ಕೆಳಾರ್ಕಳಬೆಟ್ಟು.**

**ನಿರ್ದೇಶನ: ಶ್ರೀ ಕೇಶವ ರಾವ್ ಬಡಾನಿಡಿಯೂರು ಆಯೋಜಕರು: ಶ್ರೀ ಜಯರಾಮ ಭಟ್ಟ.**

---

॥ ಶ್ರೀ ರಾಜರಾಜೇಶ್ವರೀ ಪ್ರಸನ್ನ ॥

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

**ಕೋಡಿಂಬಾಡಿ–ಪುತ್ತೂರು ತಾಲೂಕು ದ.ಕ.–574325.**

*ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳ ಹಾಗೂ ತತ್ಕರ ಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಕೃಪಾಶೀರ್ವಾದಗಳೊಂದಿಗೆ*

ಪ್ರಿಯ ಭಗವದ್ಭಕ್ತರೆ,

ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ

### "ಶರನ್ನವರಾತ್ರಿ ಮಹೋತ್ಸವ ಹಾಗೂ ಶ್ರೀ ಚಂಡಿಕಾ ಹೋಮ"

ದಿನಾಂಕ 21–09–2017ರಿಂದ ದಿನಾಂಕ 30–09–2017ರ ತನಕ ನಡೆಯಲಿರುವುದರಿಂದ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ

ಯಂ.ನಾಗೇಶ ಶರ್ಮ, ಅರ್ಚಕರು (ಪೊ:9901247080)

ಟಿ.ಅಣ್ಣಪ್ಪಯ್ಯ, ಅಧ್ಯಕ್ಷರು (08251–232491)

---

**SAMPATH KUMAR** Mobile : 9741508881, 8884873233

## TRISHULINI TOURIST

***The Tourist People***

Near Mahishamardhini Temple, Bailur, Udupi.

**ALL TYPES OF VEHICLES AVAILABLE FOR HIRE**



ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ದ ವತಿಯಿಂದ
ಶ್ರೀ ಶಾರದಾ ಮಂಟಪದಲ್ಲಿ ಋಗುಪಾಕರ್ಮ ಆಚರಣೆ



ಉಡುಪಿ ನಗರಸಭೆಗೆ ಶ್ರೀ ಪ್ರಫುಲ್ಲಚಂದ್ರ ರಾವ್‌ರವರು ಕಸಸಂಗ್ರಹಣೆ ಮಾಡಲು
ಟಾಟಾ ಏಸ್ ವಾಹನವನ್ನು ಕೊಡಮಾಡಿದರು.



ಮಂಗಳೂರು ವಿಶ್ವವಿದ್ಯಾನಿಲಯ ಅಧ್ಯಾಪಕ ಸಂಘದಿಂದ ಸನ್ಮಾನಿತರಾದ
ಡಾ| ವೈ. ರವೀಂದ್ರನಾಥ ರಾವ್




ಸುಳ್ಯ ಇನ್ನರ್ ವ್ಹೀಲ್ ಕ್ಲಬ್‌ನ ಪದಗ್ರಹಣ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ
ಡಾ| ಶೋಭಿತಾ ಸತೀಶ್ ಪುತ್ತೂರು ಅವರನ್ನು ಸನ್ಮಾನಿಸಲಾಯಿತು.



ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಭಾಗವಹಿಸಿದ ಮಕ್ಕಳು.



ಎನ್‌ಎಸ್‌ಎಸ್ ಯೋಜನಾಧಿಕಾರಿ ಶ್ರೀಮತಿ ಸವಿತಾ ಎರ್ಮಾಳು ಇವರನ್ನು ಶ್ರೀ ಪ್ರಮೋದ್
ಮಧ್ವರಾಜ್ ಇವರು ಕಾರ್ಯಕ್ರಮವೊಂದರಲ್ಲಿ ಸನ್ಮಾನಿಸಿದರು.



ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಇದರ ವಾರ್ಷಿಕ ಮಹಾಸಭೆ



ಪಡುಬಿದ್ರಿ ಸಂಘದಲ್ಲಿ ಸೋಣಡೊಂಜಿ ದಿನ



ಸುಬ್ರಹ್ಮಣ್ಯ ಸಭಾ ಮಂಗಳೂರಿನಲ್ಲಿ ಋಗುಪಾಕರ್ಮ




ಬೆಳ್ತಂಗಡಿ ಸಂಘದ ಸದಸ್ಯರು ಸ್ವಾತಂತ್ರ್ಯೋತ್ಸವವನ್ನು ಕನ್ಯಾನದ ಭಾರತಸೇವಾಶ್ರಮದ ಹಿರಿಯ
ನಾಗರಿಕರೊಂದಿಗೆ ಆಚರಿಸಿದರು.

# ಸೃಜನಶೀಲ ಕಲಾವಿದೆ ಮೀರಾ



ಮಾನವನ ಪ್ರಥಮ ಭಾಷೆಯೇ ಚಿತ್ರಕಲೆ. ಹಾಗಾಗಿ ಪ್ರತಿಯೋರ್ವ ವ್ಯಕ್ತಿಯ ಜೀವನದಲ್ಲೂ ಪ್ರತ್ಯಕ್ಷವಾಗಿ ಯಾ ಪರೋಕ್ಷವಾಗಿ ಚಿತ್ರಕಲೆ ತನ್ನ ಪ್ರಭಾವವನ್ನು ಬೀರುತ್ತಿದೆ. ನಮ್ಮ ಶೈಕ್ಷಣಿಕ ರಂಗದಲ್ಲೂ ಚಿತ್ರಕಲಾ ಶಿಕ್ಷಣವೂ ಒಂದು ಅವಿಭಾಜ್ಯ ಅಂಗವಾಗಿದೆ. ಹಾಗಾಗಿ ಚಿತ್ರಕಲೆಯಲ್ಲಿ ಅಭಿರುಚಿಯುಳ್ಳ ವಿದ್ಯಾರ್ಥಿಗಳಿಗೆ ಕಲೆಯಲ್ಲಿ ಪದವಿ ಪಡೆಯಲು ಬಹಳಷ್ಟು ಅವಕಾಶಗಳಿವೆ. ಇಂದು ಕಲಾ ಪದವಿ ಪಡೆದ ವಿದ್ಯಾರ್ಥಿಗಳು ಕಲಾ ಶಿಕ್ಷಕರಾಗಿ, ವಾಣಿಜ್ಯ ಕಲೆಗಾರರಾಗಿ, ಪತ್ರಿಕಾ ಮಾಧ್ಯಮ ಮತ್ತು ಇನ್ನಿತರ ಕಲಾಕ್ಷೇತ್ರಗಳಲ್ಲಿ ತಮ್ಮ ಬದುಕಿನ ನೆಲೆಯನ್ನು ಕಂಡುಕೊಳ್ಳುತ್ತಿದ್ದಾರೆ. ಉಳಿದ ಕೆಲವರು ತಮ್ಮ ಮನಸ್ಸಿನ ಸಂತೋಷಕ್ಕಾಗಿ ಹವ್ಯಾಸಿ ಕಲಾವಿದರಾಗಿ ಮುಂದುವರೆಯುತ್ತಾರೆ. ಅಂತಹವರಲ್ಲಿ ಉಡುಪಿ ಚಿಟ್ಪಾಡಿಯಲ್ಲಿರುವ ಕಲಾವಿದೆ ಶ್ರೀಮತಿ ಮೀರಾ ಎಸ್.ಆರ್. ಒಬ್ಬರು. ಮೂಲತ: ಹಾಸನದವರಾದ ಇವರು ಅಲ್ಲಿನ ನಿರ್ಮಲಾ ಕಲಾಶಾಲೆಯೊಂದರಲ್ಲಿ ಚಿತ್ರಕಲಾ ಶಿಕ್ಷಕರ ತರಬೇತಿ ಪಡೆದು, ವಿವಾಹದ ನಂತರ ಉಡುಪಿಗೆ ಬಂದು ಇಲ್ಲಿನ ಚಿತ್ರಕಲಾ ಶಾಲೆಯಲ್ಲಿ ಕಲಿತು ಪದವಿಗಳಿಸಿದರು. ಇಂದು ತನ್ನ ಬಿಡುವಿನ ಸಮಯದಲ್ಲಿ ಕಲಾಕೃತಿಗಳ ರಚನೆಯಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಪೆನ್ಸಿಲ್ ಶೇಡಿಂಗ್ ಮತ್ತು ಕ್ರೇಯಾನ್‌ಗಳಲ್ಲಿ ಪ್ರಕೃತಿದೃಶ್ಯ, ವಸ್ತುಚಿತ್ರ ಮತ್ತು ಬೇಲೂರು ಹಳೆಬೀಡಿನಂತಹ ಶಿಲ್ಪ ಕಲಾಕೃತಿಗಳನ್ನು ಬಹಳ ಸೊಗಸಾಗಿ ಚಿತ್ರಿಸಿರುವ ಇವರು, ಜಲವರ್ಣದ ಪ್ರಕೃತಿ ಚಿತ್ರಗಳನ್ನು ರಚಿಸುವಲ್ಲಿ ಹೆಚ್ಚಿನ ಹಿಡಿತ ಹೊಂದಿದ್ದಾರೆ. ಹಾಗೆಯೇ ವಿವಿಧ ವರ್ಗದ ಜನರ ದೈನಂದಿನ ದುಡಿಮೆ, ಹಬ್ಬ-ಹರಿದಿನಗಳ ಆಚರಣೆ ಹೀಗೆ ಹಲವಾರು ವಿಷಯಗಳನ್ನು ಆಯ್ದು ಕೊಂಡು ಮೂರ್ತ, ಅರೆ ಅಮೂರ್ತ ಶೈಲಿಗಳಲ್ಲಿ (ಪೋಸ್ಟರ್ ಕಲರ್) ಬಹಳ ನಾಜೂಕುತನದಿಂದ ಚಿತ್ರಿಸಿದ್ದು, ಭಾವಚಿತ್ರ ರಚನೆಯಲ್ಲೂ ತನ್ನ ಪ್ರತಿಭೆ ಮೆರೆದಿದ್ದಾರೆ. ಜೊತೆಗೆ ಮೆಹಂದಿ ಕಲೆ, ಕರಕುಶಲಕಲೆ, ಎಂಬ್ರಾಯಿಡರಿ ಕಲೆ, ನಿಟ್ಟಿಂಗ್ ಮತ್ತು ದೊಡ್ಡ ಗಾತ್ರದ ವಾಲ್ ಹ್ಯಾಂಗಿಂಗ್ಸ್ ರಚನೆಯಲ್ಲೂ ಸಿದ್ಧ ಹಸ್ತರು. ಉಡುಪಿಯಲ್ಲಿ ಮತ್ತು ತನ್ನೂರಿನಲ್ಲೂ ಹಲವು ಸಂಘ ಸಂಸ್ಥೆಗಳ ಆಶ್ರಯದಲ್ಲಿ ಏಕವ್ಯಕ್ತಿ ಪ್ರದರ್ಶನಗಳನ್ನು ನಡೆಸಿ, ಸಮೂಹ ಚಿತ್ರಕಲಾ ಪ್ರದರ್ಶನದಲ್ಲೂ ಭಾಗವಹಿಸಿದ್ದಾರೆ. ಇವರು ರಂಗೋಲಿಯನ್ನೂ ಬಹಳ ಆಕರ್ಷಕವಾಗಿ ರಚಿಸಬಲ್ಲರು. ಸುತ್ತಮುತ್ತಲಿನ ಶಾಲೆಗಳಲ್ಲಿ, ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ತೀರ್ಪುಗಾರರಾಗಿ ಗುರುತಿಸಿಕೊಂಡಿದ್ದಾರೆ. ವಿವಿಧ ಸಂಸ್ಥೆಗಳು ನಡೆಸುವ ಚಿತ್ರಕಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಶಸ್ತಿ, ಬಹುಮಾನಗಳನ್ನೂ ಗಳಿಸಿದ್ದು, ದೆಹಲಿಯ ನೆಹರೂ ಬಾಲಭವನ ಸೊಸೈಟಿಯವರಿಂದ ಪುರಸ್ಕರಿಸಲ್ಪಟ್ಟಿದ್ದಾರೆ. ಪತಿ ಶ್ರೀ ರಾಜೇಶ್ ಬಿ. ರಾವ್, ಪುತ್ರ ನಿಹಾಲ್ ಮತ್ತು ಬಂಧುಗಳ ನಿರಂತರ ಪ್ರೋತ್ಸಾಹವಿದೆ. "ಚಿತ್ರಕಲೆ ಮತ್ತು ರಂಗವಲ್ಲಿ ಕ್ಷೇತ್ರದಲ್ಲಿ ಕಲಿಯಲು ಬಹಳಷ್ಟಿದೆ. ಹಾಗಾಗಿ ಈ ಕ್ಷೇತ್ರದಲ್ಲಿ ಇನ್ನಷ್ಟೂ ಕಲಿತು ಸಾಧಿಸಬೇಕಿದೆ" ಎಂದು ಹೇಳುವ ಮೀರಾ ಅವರಿಗೆ ಶುಭ ಹಾರೈಸೋಣ.

**–ಕೆ. ದಿನಮಣಿ ಶಾಸ್ತ್ರೀ, ಬ್ರಹ್ಮಾವರ**





# ಪೊಳಲಿ ನಟ್ಟೋಜ ಸತೀಶ್ ರಾವ್

ಪುತ್ತೂರು ತಾಲೂಕು ಕಬಕ ನಿವಾಸಿ, ಶ್ರೀಮಾನ್ ಸತೀಶ್ ರಾವ್‌ರವರು ನಮ್ಮ ಸಮಾಜದ ಪ್ರತಿಷ್ಠಿತ ವ್ಯಕ್ತಿಯೋರ್ವರಾಗಿದ್ದು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ಚಿರಪರಿಚಿತರಾಗಿದ್ದಾರೆ. 1979ರಲ್ಲಿ ಕಾರ್ಪೊರೇಶನ್ ಬ್ಯಾಂಕ್ ಸೇರಿ, ಕಾರ್ಮಿಕ ಕ್ಷೇತ್ರದಲ್ಲಿ ಉ.ಕ. ಜಿಲ್ಲಾ ಸರ್ವಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ, ಜಿಲ್ಲಾ ಠೇವಣಿ ಸಂಗ್ರಹಗಾರರ ಸಂಘದ ಗೌರವಾಧ್ಯಕ್ಷರಾಗಿ, ರಾಜ್ಯ ಸಮಿತಿಯ ಸದಸ್ಯನಾಗಿ ಹಾಗೂ ಪುತ್ತೂರು ನೌಕರರ ಸಂಘದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದಾರೆ.

ಸಾಮಾಜಿಕ ಕ್ಷೇತ್ರದಲ್ಲಿ, ದಾಂಡೇಲಿ ಜೇಸೀಸ್ ಸಂಸ್ಥೆಯ ಪದಾಧಿಕಾರಿಯಾಗಿ, ಪುತ್ತೂರು ರೋಟರ್ಯಾಕ್ಟ್‌ನ ಅಧ್ಯಕ್ಷ, ವಲಯಾಧ್ಯಕ್ಷರಾಗಿ, ರೋಟರಿ ಸಂಸ್ಥೆಯ ಅಧ್ಯಕ್ಷ – "ಜಿಲ್ಲಾ ಅಸಿಸ್ಟೆಂಟ್ ಗವರ್ನರ್" ಆಗಿ ದಾಖಲೆಯ 26 ಪ್ರಶಸ್ತಿ ಮತ್ತು ವಿಶ್ವದ ಅತ್ಯುನ್ನತ ಪ್ರಶಸ್ತಿಯನ್ನು ಗಳಿಸಿದ್ದಾರೆ.

ಶೈಕ್ಷಣಿಕ ಕ್ಷೇತ್ರದಲ್ಲಿ, ಪುತ್ತೂರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಹಾಗೂ ವಿವೇಕಾನಂದ (D.Ed., B.Ed.) ಕಾಲೇಜಿನ ಸಂಚಾಲಕರಾಗಿ, ಪ್ರಸಕ್ತ ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿ (B.E., MBA, M.Tech) ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರೂ ಆಗಿದ್ದಾರೆ.

ಧಾರ್ಮಿಕ ಕ್ಷೇತ್ರದಲ್ಲಿ: ಕಬಕ ಶ್ರೀ ಮಹಾದೇವಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಮತ್ತು ನೂತನ ದೇವಳ ನಿರ್ಮಾಣ ಮತ್ತು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷರಾಗಿ ಅಲ್ಲದೆ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ನೂತನ ದೇವಳ ನಿರ್ಮಾಣ ಮತ್ತು ಬ್ರಹ್ಮಕಲಶೋತ್ಸವ ಸಮಿತಿಯ (ಸರಕಾರದಿಂದ ನೇಮಿಸಲ್ಪಟ್ಟ ಸಮಿತಿ) ಸದಸ್ಯರಾಗಿ, ನಮ್ಮ ಸಮಾಜದ ಸುಬ್ರಹ್ಮಣ್ಯ ಸಭಾ, ಶಿವಬ್ರಾಹ್ಮಣ ಸಂಘ, ಪುತ್ತೂರು ಇದರ ಪದಾಧಿಕಾರಿಯಾಗಿ ಹಾಗೂ ಮಿತ್ರ ಸಮಾಜ ಪುತ್ತೂರು ಇದರ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ವೃತ್ತಿ ಕ್ಷೇತ್ರದಲ್ಲಿ, ಕಾರ್ಪೊರೇಶನ್ ಬ್ಯಾಂಕಿನಲ್ಲಿ ಸುಮಾರು ಮೂರುವರೆ ದಶಕಗಳ ಸಾರ್ಥಕ ಸೇವೆಯಲ್ಲಿ, ಕಳೆದ ನಿರಂತರ 5 ವರ್ಷಗಳಲ್ಲಿ, ಅತ್ಯುತ್ತಮ ಶಾಖೆ ಮತ್ತು "ಪ್ರಶಸ್ತಿ ವಿಜೇತ ಮೇನೇಜರ್" ಎಂಬ ಪ್ರಶಸ್ತಿಯನ್ನು ಪಡೆದು, ಅಂತಿಮವಾಗಿ ಬ್ಯಾಂಕಿನ ಪೊಳಲಿ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರು, ಕಳೆದ ಆಗಸ್ಟ್ ತಿಂಗಳಾಂತ್ಯಕ್ಕೆ ವೃತ್ತಿ ಜೀವನದಿಂದ ನಿವೃತ್ತರಾಗಿದ್ದಾರೆ. ಇವರು ಪೊಳಲಿ ನಟ್ಟೋಜಿ ದಿ| ಗೋವಿಂದ ರಾವ್-ದಿ|ಸುಮತಿ ದಂಪತಿಗಳ ಸುಪುತ್ರರಾಗಿದ್ದು, ಇವರ ಪತ್ನಿ ಶ್ರೀಮತಿ ವೇದವಲ್ಲಿ ಕಡಬ-ತಲೇಕಿಯವರು. ಇವರಿಗೆ ಒಬ್ಬ ಪುತ್ರ-ಇಬ್ಬರು ಪುತ್ರಿಯರಿದ್ದಾರೆ.

ನಮ್ಮ ಸ್ಥಾನಿಕ ಸಮಾಜದ ಈ ಸೇವಾಕಾಂಕ್ಷಿ ವ್ಯಕ್ತಿಯ ಉದ್ಯೋಗ ನಿವೃತ್ತಿಗೆ ಶುಭ ವಿದಾಯ ಹೇಳುತ್ತಾ ಅವರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಸಮಾಜಮುಖೀ ಸೇವೆಯು ಲಭಿಸಲೆಂದು ಹಾರೈಸುವ ಅವರ ಮಕ್ಕಳು, ಅಳಿಯಂದಿರು ಹಾಗೂ ಬಂಧು-ಬಾಂಧವರು.



# ವಿದೇಶದಲ್ಲಿ ಉನ್ನತ ವ್ಯಾಸಂಗ

ಮಂಗಳೂರು ತಾಲೂಕು ಕುಳಾಯಿಯಲ್ಲಿ ವಾಸ್ತವ್ಯವಿರುವ ಕೆ.ಸದಾಶಿವ ಶಾಸ್ತ್ರಿ ಮತ್ತು ಶ್ರೀಮತಿ ಸೌಭದ್ರೆ ಇವರ ಪುತ್ರ ಚಿ| ವಿಷ್ಣು ಪ್ರಸಾದ ಶಾಸ್ತ್ರಿಯು ತನ್ನ ಉನ್ನತ ವ್ಯಾಸಂಗಕ್ಕಾಗಿ ಯು.ಎಸ್.ಎ.ಯ ಅರಿಟೋನ್ ಸ್ಟೇಟ್ ಯುನಿವರ್ಸಿಟಿಗೆ ದಿನಾಂಕ 03-08-2017ರಂದು ತೆರಳಿರುತ್ತಾರೆ.

# ಮಕ್ಕಳ ತಜ್ಞೆ ಡಾ| ಸುಲೇಖಾ ವರದರಾಜ್ ಅವರಿಗೆ 'ಡಾಕ್ಟರ್ ಆಫ್ ದಿ ಇಯರ್' ರಾಜ್ಯ ಪ್ರಶಸ್ತಿ



ಪುತ್ತೂರು: ಇಲ್ಲಿನ ಇ.ಎಸ್.ಐ. ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಯೂ ಮಕ್ಕಳ ತಜ್ಞೆಯೂ ಆಗಿರುವ ಡಾ| ಸುಲೇಖಾ ವರದರಾಜ್ ಅವರಿಗೆ ಸುಮಾರು ಒಂದು ಸಾವಿರ ವೈದ್ಯರನ್ನು ಹೊಂದಿರುವ ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆಯ ಇ.ಎಸ್.ಐ. ವಿಭಾಗವು ಉತ್ತಮ ಸಾಧನೆಗಾಗಿ **'ಡಾಕ್ಟರ್ ಆಫ್ ದಿ ಇಯರ್'** ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಇತ್ತೀಚೆಗೆ ಬೆಂಗಳೂರಿನ ರಾಜಾಜಿನಗರದ ವೈದ್ಯಕೀಯ ಕಾಲೇಜು ಆವರಣದಲ್ಲಿ ನಡೆದ ಸಮಾರಂಭದಲ್ಲಿ ವೈದ್ಯಕೀಯ ನಿರ್ದೇಶಕರಾದ ಡಾ| ವನಜಾಕ್ಷಿ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಇಲಾಖೆಯ ವೈದ್ಯಕೀಯ ಉಪ ನಿರ್ದೇಶಕರಾದ ಡಾ| ಕುಮಾರ್ ಮತ್ತು ಇತರ ಅಧಿಕಾರಿಗಳೂ ಇಲಾಖೆಯ ಇತರ ವೈದ್ಯರುಗಳೂ ಉಪಸ್ಥಿತರಿದ್ದರು. ಡಾ| ಸುಲೇಖಾ ಅವರು ಇಲಾಖೆಯಲ್ಲಿ ಸಲ್ಲಿಸಿದ ಸೇವೆ, ವೈದ್ಯಕೀಯ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಯಾಗಿ ನಡೆಸಿದ ಸೇವೆ, ಪ್ರಕಟಗೊಳಿಸಿದ ವೈದ್ಯಕೀಯ ಬರಹಗಳು ಮತ್ತು ಹದಿಹರೆಯದ ಮಕ್ಕಳ ವರ್ತನೆ ಮತ್ತು ಭಾವನಾತ್ಮಕ ಸಮಸ್ಯೆಗೆ ನಡೆಸುವ ಕೌನ್ಸೆಲಿಂಗ್ ಮುಂತಾದ ಸಾಧನೆಗಳನ್ನು ಪ್ರಶಸ್ತಿ ವಿತರಿಸುವಾಗ ವಿಶೇಷವಾಗಿ ಉಲ್ಲೇಖಿಸಲಾಯಿತು.

ಇಲ್ಲಿನ ಸರಕಾರಿ ಇ.ಎಸ್.ಐ ಆಸ್ಪತ್ರೆಯ ವೈದ್ಯಾಧಿಕಾರಿಯಾಗಿರುವ ಡಾ| ಸುಲೇಖಾ ವರದರಾಜ್ ಅವರು ಮಕ್ಕಳ ತಜ್ಞರಾಗಿಯೂ ಮಕ್ಕಳ ಮನೋಚಿಕಿತ್ಸಕರಾಗಿಯೂ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡವರು. ದೇಶಾದ್ಯಂತ ಸುಮಾರು ಹದಿನಾರು ಸಾವಿರ ಮಕ್ಕಳ ತಜ್ಞರನ್ನು ಒಳಗೊಂಡ ಭಾರತೀಯ ಮಕ್ಕಳ ತಜ್ಞರ ಅಕಾಡೆಮಿಯ ಸಕ್ರಿಯ ಸದಸ್ಯರಾದ ಅವರು ಅಡೋಲೆಸೆಂಟ್ ವಿಭಾಗದ ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರು, ಮುಂಬಯಿ, ಆಗ್ರಾ ಮುಂತಾದೆಡೆಗಳಲ್ಲಿ ನಡೆದ ರಾಷ್ಟ್ರಮಟ್ಟದ ವೈದ್ಯಕೀಯ ಸಮ್ಮೇಳನಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಹ್ವಾನಿಸಲ್ಪಟ್ಟಿದ್ದಾರೆ. ಪತ್ರಿಕೆಗಳಲ್ಲಿ ಇವರ ಹಲವಾರು ವೈದ್ಯಕೀಯ ಬರಹಗಳು ಪ್ರಕಟವಾಗಿದ್ದು, ಆಕಾಶವಾಣಿ ಮತ್ತು ಟಿವಿ ಮಾಧ್ಯಮಗಳಲ್ಲೂ ವೈದ್ಯಕೀಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

ಪುತ್ತೂರಿನ ಬೊಳುವಾರು ನಿವಾಸಿಯಾದ ಡಾ| ಸುಲೇಖಾ ಅವರು ಕಾಸರಗೋಡಿನ ಶ್ರೀ ಮರ್ದಂಬೈಲು ಉಮೇಶ ರಾವ್ ಮತ್ತು ಶ್ರೀಮತಿ ಸರಸ್ವತಿ ದಂಪತಿಗಳ ಪುತ್ರಿ. ಪತಿ ಡಾ| ವರದರಾಜ ಚಂದ್ರಗಿರಿ ಅವರು ಕಾಲೇಜು ಪ್ರಾಧ್ಯಾಪಕರಾಗಿದ್ದಾರೆ. ಮಗ ಸೃಜನ್ ರಾಜ್ ಬಿ. ಫಾರ್ಮಾ ವ್ಯಾಸಂಗ ಮಾಡುತ್ತಿದ್ದು ಮಗಳು ಸಂಜನಾ ರಾಜ್ ಹತ್ತನೇ ತರಗತಿ ವಿದ್ಯಾರ್ಥಿಯಾಗಿದ್ದಾರೆ.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.

N. Laxmi Prasad

ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

*With Best Complimemts From*
SRI M. SHAILESH RAO Ph : 9448624324
B.E., Civil
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

# ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಳಕ್ಕೆ ಸಿ.ಸಿ ಕ್ಯಾಮೆರಾ



ಪುರಾತನ ದೇವಾಲಯುಗಳಲ್ಲಿ ಒಂದಾದ ಪಡುಬಿದ್ರಿ ಪಾದೆಬೆಟ್ಟಿನ ಶ್ರೀ ವಿಷ್ಣುಮೂರ್ತಿ ದೇವಸ್ಥಾನವು ಸುಮಾರು 800 ವರ್ಷಗಳ ಇತಿಹಾಸವನ್ನು ಹೊಂದಿದ್ದು, ಸುತ್ತ- ಮುತ್ತಲೂ ಹಚ್ಚಹಸುರಿನ ಪ್ರಶಾಂತ ವಾತಾವರಣವನ್ನು ಹೊಂದಿದ್ದು, ಭಕ್ತರ ಅಭಿಷ್ಟಗಳನ್ನು ಈಡೇರಿಸುವ ತಾಣವಾಗಿದೆ.

ಸುಮಾರು 15 ವರ್ಷಗಳ ಹಿಂದೆ ಊರ ಹಾಗೂ ಪರವೂರ ಭಕ್ತರ ಸಹಕಾರದಿಂದ ಅಚ್ಚುಕಟ್ಟಾದ ಮತ್ತು ಸುಂದರವಾದ ಶಿಲಾಮಯ ಗರ್ಭಗುಡಿ ಮತ್ತು ತೀರ್ಥ ಮಂಟಪವು ನಿರ್ಮಿಸಲ್ಪಟ್ಟು, ಶ್ರೀ ವಿಷ್ಣುಮೂರ್ತಿ ದೇವರನ್ನು ಪುನಃ ಪ್ರತಿಷ್ಠಾಪಿಸಲಾಯಿತು. 2012ರಲ್ಲಿ ದೇವಳಕ್ಕೆ ವಿಶಾಲವಾದ ಸುತ್ತು ಪೌಳಿಯನ್ನು ನಿರ್ಮಿಸಿ, ಶ್ರೀ ಮಹಾಗಣಪತಿ ಮತ್ತು ಶ್ರೀ ಶಾಸ್ತಾವು ದೇವರುಗಳನ್ನು ಪ್ರತಿಷ್ಠಾಪಿಸಲಾಯಿತು. ಒಂದೂವರೆ ವರ್ಷದ ಹಿಂದೆ ಮೂರು ದೇವರುಗಳಿಗೂ ರಜತ ಕವಚ ಭಕ್ತರ ನೆರವಿನಿಂದ ದೇವರಿಗೆ ಸಮರ್ಪಿಸಲಾಯಿತು.

ದೇವಳದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳವರ ಮಾರ್ಗದರ್ಶನದಲ್ಲಿ ಈ ಕ್ಷೇತ್ರದಲ್ಲಿ ಸೋಣ ತಿಂಗಳಿನಲ್ಲಿ ಹೂವಿನ ಪೂಜೆ, ಗಣಹೋಮ, ಸತ್ಯನಾರಾಯಣ ಕಥೆ, ವಟುಗಳ ವೇದಾಧ್ಯಯನ ಶಿಬಿರಗಳು ಹಾಗೂ ಶ್ರೀ ಮಹಾವಿಷ್ಣುವಿಗೆ ರಂಗಪೂಜಾದಿ ಸೇವೆಗಳು ನಡೆಯುತ್ತದೆ. ದೇಶದ ಬ್ಯಾಂಕಿಂಗ್ ಇತಿಹಾಸದಲ್ಲೇ ಅದ್ಭುತ ಸಾಧನೆಗೈದ ಕರ್ನಾಟಕ ಬ್ಯಾಂಕ್ನ ಸಹಕಾರದಲ್ಲಿ ದೇವಳಕ್ಕೆ ಸರ್ಕಾರದ ಆದೇಶದಂತೆ, ಭದ್ರತೆಯ ದೃಷ್ಠಿಯಿಂದ ಸಿ.ಸಿ ಕ್ಯಾಮರಗಳನ್ನು ಅಳವಡಿಸಲಾಯಿತು. ಇದರೊಂದಿಗೆ ಸುಮಾರು 22 ಲಕ್ಷ ರೂ.ಗಳ ವೆಚ್ಚದಲ್ಲಿ ತಗಡಿನ ಮೇಲ್ಛಾವಣಿ, ಹೊರಾಂಗಣಕ್ಕೆ ಗ್ರಾನೈಟ್ ಕಲ್ಲು ಹಾಸುವಿಕೆ, ಇಡೀ ದೇವಳಕ್ಕೆ ಬಣ್ಣ ಬಳಿಯುವುದು ಮೊದಲಾದ ಅಗತ್ಯ ಕಾಮಗಾರಿಗಳನ್ನು ನಡೆಸುವ ಉದ್ದೇಶವಿದೆ ಮತ್ತು ಇದಕ್ಕೆ ಭಕ್ತ ಮಹಾಶಯರ ಸಹಾಯವನ್ನು ನಿರೀಕ್ಷಿಸಲಾಗಿದೆ.

## ಕನ್ಯಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 16-09-2017 | ಕನ್ಯಾ ಸಂಕ್ರಮಣ | 05-10-2017 | ಹುಣ್ಣಿಮೆ |
| | ಸರ್ವೈಕಾದಶಿ | 08-10-2017 | ಸಂಕಷ್ಟಹರ ಚತುರ್ಥಿ |
| 20-09-2017 | ಮಹಾಲಯ ಅಮಾವಾಸ್ಯೆ | | ಚಂದ್ರೋದಯ ರಾತ್ರಿ 8-39 |
| 21-09-2017 | ನವರಾತ್ರಿ ಆರಂಭ | 15-10-2017 | ಸರ್ವೈಕಾದಶಿ |
| | ಆಶ್ವೀಜ ಮಾಸದ ಶುಕ್ಲಪಕ್ಷಾರಂಭ | 17-10-2017 | ತುಲಾ ಸಂಕ್ರಮಣ, |
| 27-09-2017 | ಶ್ರೀಶಾರದಾ ದೇವಸ್ಥಾನದಲ್ಲಿ | | ಸಾಯಂ ಜಲಪೂರಣಂ |
| | ಶ್ರೀಶಾರದಾ ಪೂಜೆ, | | ರಾತ್ರೌ ಚಂದ್ರೋದಯೇ |
| | ಮೂಲಾನಕ್ಷತ್ರ ಸಹಸ್ರ ನಾಮಾರ್ಚನೆ | | ತೈಲಾಭ್ಯಂಗ: ಗಂಟೆ 5ಕ್ಕೆ |
| 28-09-2017 | ದುರ್ಗಾಷ್ಟಮಿ | 18-10-2017 | ನರಕ ಚತುರ್ದಶಿ |
| 29-09-2017 | ಮಹಾನವಮಿ, ಆಯುಧಪೂಜೆ | 19-10-2017 | ದೀಪಾವಳಿ, ಧನಲಕ್ಷ್ಮೀ ಪೂಜೆ, |
| 30-09-2017 | ವಿಜಯದಶಮಿ, ಶಮೀ ಪೂಜೆ | | ಅಮಾವಾಸ್ಯೆ |
| | ಶಾರದಾ ಮಂಟಪ ಉಡುಪಿಯಲ್ಲಿ | 20-10-2017 | ಬಲಿಪಾಡ್ಯಮಿ, ಗೋಪೂಜೆ, |
| | ಚಂಡಿಕಾಹೋಮ | | ತುಳಸೀಪೂಜಾರಂಭ, |
| 01-10-2017 | ಸರ್ವೈಕಾದಶಿ | | ಕಾರ್ತಿಕಮಾಸ ಶುಕ್ಲಪಕ್ಷಾರಂಭ |

## ಶ್ರೀ ಘನಪುರೀ ಸಂಸ್ಥಾನ ಕೋದಂಡಾಶ್ರಮ ಮಠ, ಶ್ರೀ ಕಾಮಾಕ್ಷೀ ಶಾರದಾ ಪೀಠಮ್, ಹೆಬ್ಬೂರು,

**ತುಮಕೂರು ಜಿಲ್ಲೆ, ಕರ್ನಾಟಕ-572120, ದೂರವಾಣಿ : 0816-2241032**

### ನವರಾತ್ರ (ದಸರಾ) ಆಚರಣೆ

ಮಾನ್ಯರೆ,

**ಶ್ರೀ ಕ್ಷೇತ್ರದಲ್ಲಿ ತಾ। 20-09-2017 ರಂದು ಬುಧವಾರ ಮಹಾಲಯ ಅಮಾವಾಸ್ಯೆ ಪ್ರಯುಕ್ತ ವಿಶೇಷ ನವಕಾಭಿಷೇಕ ಮತ್ತು ದುರ್ಗಾಹೋಮ ನಡೆಯಲಿರುವುದು.**

ಹಾಗೂ ಶರನ್ನವರಾತ್ರ (ದಸರಾ) ಪ್ರಯುಕ್ತ ತಾ। 21-09-2017 ಅಶ್ವಯುಜ ॥ಶು॥ ಪಾಡ್ಯದಿಂದ ತಾ। 30-09-2017 ವಿಜಯದಶಮಿಯವರೆಗೆ

### ನಿತ್ಯ ಚಂಡಿಕಾ ಹೋಮ ನಡೆಯಲಿದೆ

**25-09-2017 ಸೋಮವಾರ : ಲಲಿತಾ ಹೋಮ ನಡೆಯಲಿದೆ**

ಹೋಮದ ಪೂರ್ಣಾಹುತಿಯು ಬೆಳಗ್ಗೆ 11.30 ಗಂಟೆಗೆ ನಡೆಯಲಿದ್ದು, ಶ್ರೀ ಕಾಮಾಕ್ಷೀ ಶಾರದಾದೇವಿಯ ಮಹಾಪೂಜೆ 12.30 ಗಂಟೆಗೆ, ಶ್ರೀ ಸ್ವಾಮೀಜಿಯವರಿಂದ ಮಂತ್ರಾಕ್ಷತೆ, ನಂತರ ಪ್ರಸಾದ ಭೋಜನ ವ್ಯವಸ್ಥೆ ಇರುತ್ತದೆ. ತಾವೆಲ್ಲರೂ ಕುಟುಂಬ ಸಮೇತರಾಗಿ ಬಂಧು ಮಿತ್ರರೊಂದಿಗೆ ಭಾಗವಹಿಸಿ ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ. ಸಮಾಜಬಾಂಧವರು ಮತ್ತು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿಜ್ಞಾಪನೆ.

ತಾ. 21-09-2017ರಿಂದ ತಾ. 30-09-2017 ವಿಜಯದಶಮಿಯ ವರೆಗೆ ಸಂಜೆ 6.30 ರಿಂದ 8 ಗಂಟೆಯವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಲಿದೆ

ಸರ್ವರಿಗೂ ಆದರದ ಸ್ವಾಗತ

**ಕಾರ್ಯನಿರ್ವಾಹಕ ಆಡಳಿತ ಮಂಡಳಿ/ವಿಶ್ವಸ್ತ ಮಂಡಳಿ**

**ಸೂಚನೆ:-ಚಂಡಿಕಾಹೋಮ ಸೇವೆ ರೂ.12000/-(ಮುಂಗಡವಾಗಿ ಕಾಯ್ದಿರಿಸಬೇಕು), ಸೇವೆ ಮಾಡಿಸುವವರು ಬೆಳಗ್ಗೆ 8.00 ಗಂಟೆಗೆ ಹಾಜರಿರಬೇಕು**

**ಹೆಚ್ಚಿನ ಮಾಹಿತಿಗಾಗಿ, ಶ್ರೀ ಕೋದಂಡಾಶ್ರಮ ಮಠದ ಕಚೇರಿ: 0816 2241032,**
**ವ್ಯವಸ್ಥಾಪಕರು : ಸುಬ್ರಹ್ಮಣ್ಯರಾವ್ ಕೆ. (99019 94409)**
**ವಿಶ್ವಸ್ತ ಮಂಡಳಿ ಸದಸ್ಯ : ಸತ್ಯನಾರಾಯಣ ಹೆಚ್.ಕೆ (94489 27138)**
**ಧರ್ಮಾಧಿಕಾರಿ ಬೆಂಗಳೂರು : ಲಕ್ಷ್ಮೀಕಾಂತ್ ಬಿ ಎಸ್ : 94480 77821**

# ಅಮೆರಿಕಾದಲ್ಲಿ ಹರಿಕಥೆ

ಶ್ರೀ ಶಾರದಾವೇದಿಕೆಯ ಮಹಾಪೋಷಕರಾದ ಸಾಹಿತಿ ನಿವೃತ್ತ ಅಧ್ಯಾಪಕ ಹರಿದಾಸ ಶ್ರೀ ಮರೂರು ನಾರಾಯಣ ಹೆಬ್ಬಾರ್ ರವರು ತಾವು ಅಮೇರಿಕಾ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅಟ್ಲಾಂಟಾ ನಗರದಲ್ಲಿ ಇಂಜಿನಿಯರುಗಳಾದ ಶ್ರೀಮತಿ ಜ್ಯೋತ್ಸ್ನಾ ಮತ್ತು ಮಧುಕರ್ ಇವರ ನಿವಾಸದಲ್ಲಿ ಶ್ರೀ ಜಗನ್ನಾಥ, ಶ್ರೀ ಬಲರಾಮ ಮತ್ತು ಶ್ರೀ ಸುಭದ್ರಾದೇವಿಯವರ ರಥೋತ್ಸವದ ಸಂದರ್ಭದಲ್ಲಿ ಶ್ರೀ ಕೃಷ್ಣಲೀಲೆ ಎಂಬ ಕಥಾಭಾಗದ ಹರಿಕಥಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕನ್ನಡದಲ್ಲಿ ಕೀರ್ತನೆಗಳನ್ನು ಹೇಳಿ ಹಿಂದಿ ಹಾಗೂ ಇಂಗ್ಲೀಷಿನಲ್ಲಿ ಅರ್ಥವನ್ನು ವಿವರಿಸಿದ್ದುದು ವಿಶೇಷವಾಗಿತ್ತು.

## ನಿಧನ





ಬಜ್ಪೆ ಭುಜಂಗ ರಾವ್(92) ಮತ್ತು ಅವರ ಪತ್ನಿ ಶಾಂತಾ ಬಿ.ರಾವ್ (80) ಸಾವಿನಲ್ಲೂ ಒಂದಾದ ದಂಪತಿಗಳು.

ಮೂಲತಃ ಬಜ್ಪೆಯವರಾಗಿದ್ದ ಭುಜಂಗ ರಾವ್ ತಮ್ಮ ಪತ್ನಿಯೊಂದಿಗೆ ಮುಂಬೈನ ಗೋರೆಗಾಂನಲ್ಲಿ ವಾಸವಾಗಿದ್ದರು. ಶಾಂತಾ ಬಿ.ರಾವ್ ಹೃದಯಾಘಾತದಿಂದ ಜುಲೈ 31 ಸೋಮವಾರ ಸ್ವಗ್ರಹದಲ್ಲಿ ನಿಧನರಾದರು. ಮುಂದಿನ ಒಂದು ವಾರದಲ್ಲಿ ಭುಜಂಗ ರಾವ್ ಅ.7 ಸೋಮವಾರ ಸ್ವಗೃಹದಲ್ಲಿ ನಿಧನರಾದರು. ಮೃತರು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.



### ಶ್ರೀಮತಿ ಶಾರದಮ್ಮ

ಬಾರಕೂರು ಮಸ್ಕಿಬೈಲು ದಿ. ಲಕ್ಷ್ಮೀ ನಾರಾಯಣಯ್ಯನವರ ಧರ್ಮಪತ್ನಿ ಶಾರದಮ್ಮ (80 ವರ್ಷ) ತಾ.23.07.2017 ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

### ನಂದಿಕೂರು ವಿಜಯಕುಮಾರ್

ವಿಜಯವಾಡದಲ್ಲಿ ಉದ್ಯೋಗದಲ್ಲಿದ್ದ ನಂದಿಕೂರು ವಿಜಯಕುಮಾರ ರವರು 12.08.2017ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

### ಸತೀಶ ಕುಮಾರ್

ನೆಲ್ಲಿಕುಂಜದ ನಿವಾಸಿ ಶ್ರೀ ಸತೀಶ ಕುಮಾರರವರು ತಾ.30-08-2017ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನಹೊಂದಿದರು.

### ಎಂ.ಆರ್.ಮೋಹನ್ ರಾವ್

ಮಡಿಕೇರಿ ಮೂರ್ನಾಡು ನಿವಾಸಿ ಶ್ರೀ ಎಂ.ಆರ್.ಮೋಹನ್ ರಾವ್ ಕಟ್ಟೆಮಾಡು ಇವರು ತಾ.07-08-2017ರಂದು ನಿಧನಹೊಂದಿದರು.

## ವಿಳಾಸ ಬದಲಾವಣೆ

ಕಾರ್ಕಳ ಭುವನೇಂದ್ರ ಕಾಲೇಜಿನ ಬಳಿ ವಾಸ್ತವ್ಯವಿದ್ದ ಶ್ರೀಮತಿ ಇನ್ನ ರಾಜಮ್ಮ ಎ ರಾವ್ ಇವರು #302, HAT HILL CREST APARTMENT ಮೂರನೇ ಅಡ್ಡರಸ್ತೆ, ಚಿಲಿಂಬಿ ಮಂಗಳೂರು 576006 ಇಲ್ಲಿಗೆ ತಮ್ಮ ವಿಳಾಸವನ್ನು ಬದಲಾಯಿಸಿದ್ದಾರೆ.

★★★★ ★★★★

**ನೂತನ ವಿಳಾಸ**

ಶ್ರೀಮತಿ ಶಾಂತಾ ಜಿ ಶಾನುಭಾಗ, "ಅನುಗ್ರಹ", 3-121/33,
ಸಮೃದ್ಧಿನಗರ, ದೆಂದೂರುಕಟ್ಟೆ 576120

## ಶುಭ ವಿವಾಹ


ತೆಳ್ಳಾರು ಕಲ್ಲೊಟ್ಟು ಶ್ರೀಮತಿ ರಜನಿ ಹಾಗೂ ಶ್ರೀ ಕೆ. ದಿನೇಶ ರಾವ್ ರವರ ಪುತ್ರ **ರಕ್ಷಿತ್ ಕುಮಾರ್** ಹಾಗೂ ಶೃಂಗೇರಿ ಬೀರನಬೈಲು ಶ್ರೀಮತಿ ಭಾರತಿ ಹಾಗೂ ಶ್ರೀ ತಿಮ್ಮಪ್ಪ ಹೆಬ್ಬಾರ್ ರವರ ಪುತ್ರಿ **ಮಲ್ಲಿಕಾ** ಇವರ ವಿವಾಹವು 28-06-2017 ರಂದು ಕಮಲಶಿಲೆಯ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ನೆರವೇರಿತು.

★★★★ ★★★★

ಕುಕ್ಕೆಹಳ್ಳಿ ಶ್ರೀಮತಿ ಗಾಯತ್ರಿ ಮತ್ತು ಶ್ರೀ ವಿಶ್ವನಾಥ ರಾಯರ ಪುತ್ರಿ **ಪೂಜಾ** ಹಾಗೂ ನರಸೀಪುರ ಶ್ರೀಮತಿ ಶಾಂತ ಮತ್ತು ಚಂದ್ರಶೇಖರ ಹೆಬ್ಬಾರರ ಪುತ್ರ **ಗುರುಪ್ರಸಾದ** ಇವರ ವಿವಾಹವು 27-08-2017 ರಂದು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ನೆರವೇರಿತು




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521

ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು

## ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 2

10th ANNIVERSARY

### ದಶಮಾನೋತ್ಸವದ ಅಕ್ಕರೆಯ ಕರೆಯೋಲೆ

ಯಕ್ಷಾಭಿಮಾನಿಗಳೇ,

ನಮ್ಮ ಆರಾಧ್ಯ ಮೂರ್ತಿಯಾದ ಶ್ರೀ ಸುಬ್ರಹ್ಮಣ್ಯ ದೇವರ ಹಾಗೂ ಶ್ರೀ ಶಾರದಾ ಮಾತೆಯ ಕೃಪೆಯಿಂದ ನಮ್ಮ ಸಂಸ್ಥೆಯು ಹತ್ತು ವರ್ಷಗಳನ್ನು ಪೂರೈಸಿದೆ. ನಮ್ಮ ಹೆಮ್ಮೆಯ ಸಂಸ್ಥೆಯು ಈಗ ದಶಮಾನೋತ್ಸವ ವರ್ಷದ ಸಂಭ್ರಮದ ಆಚರಣೆಯ ಹೊಸ್ತಿಲಲ್ಲಿ ಬಂದು ನಿಂತಿದೆ. 2017ರ ಸೆಪ್ಟೆಂಬರ್ ತಿಂಗಳ ನವರಾತ್ರಿಯ ಪರ್ವಕಾಲದ ಅಷ್ಟಮಿ, ನವಮಿ ಮತ್ತು ದಶಮಿ ತಿಥಿ (28, 29 ಮತ್ತು 30) ಯಂದು ಗುರುಗಳಾದ ಶ್ರೀ ಕೃಷ್ಣಮೂರ್ತಿ ಭಟ್, ಬಗ್ವಾಡಿಯವರ ನಿರ್ದೇಶನದಲ್ಲಿ ನಮ್ಮ ಕಲಾವಿದರಿಂದ ಯಕ್ಷಗಾನ ಪ್ರದರ್ಶನ ಮತ್ತು ಗುರುವಂದನೆ, ಕಲಾವಿದರಿಗೆ ಗೌರವಾರ್ಪಣೆ, ಸನ್ಮಾನದೊಂದಿಗೆ ಸಂಭ್ರಮದ ದಶಮಾನೋತ್ಸವವನ್ನು ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಆಚರಿಸಬೇಕೆಂದು ನಿಶ್ಚಯಿಸಿರುತ್ತೇವೆ. ಕಲಾಭಿಮಾನಿಗಳಾದ ತಾವು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಮ್ಮನ್ನು ಪ್ರೋತ್ಸಾಹಿಸಬೇಕೆಂದು ಅಪೇಕ್ಷಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವಸದಸ್ಯರು
ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು, ಉಡುಪಿ

### ಕಾರ್ಯಕ್ರಮಗಳ ವಿವರ

#### ಪ್ರಥಮ ದಿನದ ಕಾರ್ಯಕ್ರಮದ ವಿವರ

**28-09-2017ರ ಗುರುವಾರ ಸಂಜೆ 5.00ರಿಂದ ರಾತ್ರಿ 10.30ವರೆಗೆ**

ಸಂಜೆ 5.00 : ಯಕ್ಷಸಂಗೀತ ಶ್ರೀ ಚಂದ್ರಕಾಂತ ರಾವ್, ಮೂಡುಬೆಳ್ಳೆ
ಸಂಜೆ 5.10 : ಉದ್ಘಾಟನಾ ಸಮಾರಂಭ
ಅಧ್ಯಕ್ಷತೆ : ಶ್ರೀ ಎ. ಶ್ರೀನಿವಾಸ ರಾವ್, ಮುಖ್ಯ ಯೋಜನಾಧಿಕಾರಿ, ಉಡುಪಿ ಜಿಲ್ಲಾ ಪಂಚಾಯತ್
ಉದ್ಘಾಟಕರು : ಶ್ರೀ ಎ. ಈಶ್ವರಯ್ಯ, ಹಿರಿಯ ಕಲಾ ವಿಮರ್ಶಕರು
ಮುಖ್ಯ ಅತಿಥಿ : ಶ್ರೀ ಮನೋಹರ ಪ್ರಸಾದ್, ಸುದ್ದಿ ವಿಭಾಗ ಮುಖ್ಯಸ್ಥರು, ಉದಯವಾಣಿ, ಮಂಗಳೂರು
ಅಭ್ಯಾಗತರು : ಶ್ರೀ ಪ್ರಫುಲ್ಲಚಂದ್ರ ರಾವ್, ಮ್ಹಾಲಕರು, ಭಾರತ್ ಡೆವಲಪರ್ಸ್, ಉಡುಪಿ
: ಶ್ರೀ ಗಣೇಶ ರಾವ್, ಕುಂಭಾಶಿ, ಕಾರ್ಯದರ್ಶಿ, ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾ
ಉಪಸ್ಥಿತಿ : ಶ್ರೀ ಯು. ಅರವಿಂದ ಕುಮಾರ್, ಅಧ್ಯಕ್ಷರು, ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು
ಸನ್ಮಾನಿತರು : ಶ್ರೀ ಸಂಜೀವ ಸುವರ್ಣ, ಬನ್ನಂಜೆ, ಪ್ರಾಂಶುಪಾಲರು, ಯಕ್ಷಗಾನ ಕೇಂದ್ರ,ಇಂದ್ರಾಳಿ
: ಶ್ರೀ ಕೃಷ್ಣಮೂರ್ತಿ ಭಟ್, ಬಗ್ವಾಡಿ, ಯಕ್ಷ ಗುರುಗಳು, ಯಕ್ಷಗಾನ ಕೇಂದ್ರ, ಇಂದ್ರಾಳಿ
: ಶ್ರೀ ಶ್ರೀಧರ ಹೆಬ್ಬಾರ್, ಯಕ್ಷಗಾನ ಭಾಗವತರು/ಗುರುಗಳು
: ಶ್ರೀ ಚಂದ್ರಕಾಂತ ರಾವ್, ಮೂಡುಬೆಳ್ಳೆ, ಯಕ್ಷಗಾನ ಭಾಗವತರು
: ಶ್ರೀ ಪ್ರವೀಣ್‌ಕುಮಾರ್, ಕುಕ್ಕಿಕಟ್ಟೆ, ಯಕ್ಷಗಾನ ಭಾಗವತರು
: ಶ್ರೀ ರತ್ನಾಕರ ಶೆಣೈ, ಉಡುಪಿ, ಮದ್ದಳೆ ವಾದಕರು
: ಶ್ರೀ ರತ್ನಾಕರ ಆಚಾರ್, ಉಡುಪಿ, ಚಂಡೆ ವಾದಕರು
: ಶ್ರೀ ಗಣೇಶ್ ಶೆಣೈ, ಉಡುಪಿ, ಚಂಡೆ ವಾದಕರು
: ಶ್ರೀ ಪ್ರದೀಪ್ ಭಟ್, ಉಡುಪಿ, ಮದ್ದಳೆ ವಾದಕರು
ಸಾಯಂಕಾಲ 6.15 : ಪೂರ್ವರಂಗ
ಯಕ್ಷಗಾನ ಕೇಂದ್ರ, ಇಂದ್ರಾಳಿ ಇಲ್ಲಿಯ ವಿದ್ಯಾರ್ಥಿಗಳಿಂದ
ನಿರ್ದೇಶನ : ಶ್ರೀ ಸಂಜೀವ ಸುವರ್ಣ, ಬನ್ನಂಜೆ
ಸಾಯಂಕಾಲ 7.00 : ಯಕ್ಷಗಾನ : ಮೀನಾಕ್ಷಿ ಕಲ್ಯಾಣ
ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು,
ಶಾರದಾ ಮಂಟಪ , ಕುಂಜಿಬೆಟ್ಟು, ಉಡುಪಿ

#### ದ್ವಿತೀಯ ದಿನದ ಕಾರ್ಯಕ್ರಮದ ವಿವರ

**29-09-2017ರ ಶುಕ್ರವಾರ ಸಂಜೆ 5.00ರಿಂದ ರಾತ್ರಿ 10.30ವರೆಗೆ**

ಸಂಜೆ 5.00 : ಯಕ್ಷ ಸಂಗೀತ ಪ್ರವೀಣ್‌ಕುಮಾರ್, ಕುಕ್ಕಿಕಟ್ಟೆ
ಸಂಜೆ 5.10 : ಉದ್ಘಾಟನಾ ಸಮಾರಂಭ
ಅಧ್ಯಕ್ಷತೆ : ಶ್ರೀ ದೇವಾನಂದ ಭಟ್, ಮ್ಹಾಲಕರು, ಶೋಭಾ ಡಿಜಿಟಲ್ ಸ್ಟುಡಿಯೋ, ಬೆಳುವಾಯಿ
ಉದ್ಘಾಟಕರು : ಶ್ರೀ ಎಂ . ಆರ್. ವಾಸುದೇವ, ಮಾಜಿ ನಿರ್ದೇಶಕರು, ವಿಮಾನ ನಿಲ್ದಾಣ ಪ್ರಾಧಿಕಾರ, ಮಂಗಳೂರು
ಮುಖ್ಯ ಅತಿಥಿ : ಡಾ। ಸುದರ್ಶನ್ ರಾವ್, ಉಪಾಧ್ಯಕ್ಷರು, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು
ಅಭ್ಯಾಗತರು : ಶ್ರೀ ಕೆ. ಗಣೇಶ್ ಹೆಬ್ಬಾರ್, ಲೆಕ್ಕ ಪರಿಶೋಧಕರು, ಹೆಬ್ಬಾರ್ ಅಸೋಸಿಯೇಟ್ಸ್, ಉಡುಪಿ
: ಶ್ರೀ ಕೆ. ಮಂಜುನಾಥ ಹೆಬ್ಬಾರ್, ಮ್ಹಾಲಕರು, ಹೆಬ್ಬಾರ್ ಎಂಟರ್‌ಪ್ರೈಸಸ್, ಉಡುಪಿ
: ಡಾ। ಬಿ. ಕೆ. ಲೋಕೇಶ್ ರಾವ್, ಸ್ಕಿನ್ ಕ್ಯಾರ್, ಉಡುಪಿ
: ಶ್ರೀ ಕೆ. ಉಮೇಶ್ ರಾವ್, ನಿವೃತ್ತ ಅಭಿಯಂತರರು, ಪಿಡಬ್ಲ್ಯುಡಿ, ಮಹಾರಾಷ್ಟ್ರ
ಉಪಸ್ಥಿತಿ : ಶ್ರೀ ಯು. ಅರವಿಂದ ಕುಮಾರ್, ಅಧ್ಯಕ್ಷರು, ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು
ಸನ್ಮಾನಿತರು : ಶ್ರೀ ಸತೀಶ್ ಕೆದ್ಲಾಯ, ಯಕ್ಷಗಾನ ಭಾಗವತರು/ಗುರುಗಳು
: ಶ್ರೀ ದೇವದಾಸ ಕೂಡ್ಲಿ, ಯಕ್ಷ ಗುರುಗಳು, ಮದ್ದಳೆ ವಾದಕರು
: ಶ್ರೀ ಕೆ. ಜೆ. ಗಣೇಶ್, ಯಕ್ಷಗಾನ ಭಾಗವತರು
: ಶ್ರೀ ಮಂಜುನಾಥ ಕುಲಾಲ್, ಯಕ್ಷ ಗುರುಗಳು
: ಶ್ರೀ ಶಿವಾನಂದ ಕೋಟ, ಚಂಡೆ ವಾದಕರು
: ಶ್ರೀ ಸತೀಶ್ ಉಪಾಧ್ಯಾಯ, ಚಂಡೆ ವಾದಕರು
: ಶ್ರೀ ಬಾಲಕೃಷ್ಣ ನಾಯ್ಕ್, ಬ್ರಹ್ಮಾವರ, ಶ್ರೀ ಗಜಾನನ ಯಕ್ಷಗಾನ ಸಂಘ, ಬ್ರಹ್ಮಾವರ
ಸಾಯಂಕಾಲ 6.00 : ಯಕ್ಷಗಾನ : ವೀರ ಅಭಿಮನ್ಯು
ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು
ಶಾರದಾ ಮಂಟಪ , ಕುಂಜಿಬೆಟ್ಟು, ಉಡುಪಿ

#### ತೃತೀಯ ದಿನದ ಕಾರ್ಯಕ್ರಮದ ವಿವರ

**30-09-2017ರ ಶನಿವಾರ ಸಂಜೆ 4.00ರಿಂದ ರಾತ್ರಿ 10.30ವರೆಗೆ**

ಸಂಜೆ 4.00 : ಯಕ್ಷಸಂಗೀತ ಪ್ರವೀಣ್‌ಕುಮಾರ್, ಕುಕ್ಕಿಕಟ್ಟೆ
ಸಂಜೆ 4.10 : ಸಮಾರೋಪ ಸಮಾರಂಭದ ಉದ್ಘಾಟನೆ
ಅಧ್ಯಕ್ಷತೆ : ಶ್ರೀ ಬೊಕ್ಕಸ ಚಂದ್ರಶೇಖರ ರಾವ್, ಜನರಲ್ ಮ್ಯಾನೇಜರ್, ಕರ್ಣಾಟಕ ಬ್ಯಾಂಕ್, ಮಂಗಳೂರು
ಉದ್ಘಾಟಕರು : ಶ್ರೀ ವೈ. ಭುವನೇಂದ್ರ ರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು
ಮುಖ್ಯ ಅತಿಥಿ : ಶ್ರೀ ಟಿ. ರಂಗರಾಯ ಶಾನುಭೋಗ್, ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ಡಿ.ಎಂ, ಬೆಂಗಳೂರು
ಅಭ್ಯಾಗತರು : ಶ್ರೀ ಕೆ. ಸುರೇಶ್ ರಾವ್, ಕಾರ್ಯದರ್ಶಿ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು
: ಶ್ರೀ ಸಾಂತೂರು ಜನಾರ್ದನ ರಾವ್, ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಉಪಸ್ಥಿತಿ : ಶ್ರೀ ಯು. ಅರವಿಂದ ಕುಮಾರ್, ಅಧ್ಯಕ್ಷರು, ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು
ಸನ್ಮಾನಿತರು : ಕಳೆದ 10 ವರ್ಷಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಲು ಸಹಕರಿಸಿದ ಸಂಘ ಸಂಸ್ಥೆಗಳು ಮತ್ತು ಗಣ್ಯರು
ಗುರುತಿಸುವಿಕೆ : ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಸಂಸ್ಥೆಯ ಎಲ್ಲಾ ಸದಸ್ಯರು
ಸಾಯಂಕಾಲ 6.30 : ಯಕ್ಷಗಾನ : ಶನೀಶ್ವರ ಮಹಾತ್ಮೆ
ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು
ಶಾರದಾ ಮಂಟಪ , ಕುಂಜಿಬೆಟ್ಟು, ಉಡುಪಿ

### ಯಕ್ಷಾಭಿಮಾನಿಗಳಲ್ಲಿ ಮನವಿ

ಮಾನ್ಯರೇ,

ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು, ಉಡುಪಿ ಸಂಸ್ಥೆಯು ಕಳೆದ 10 ವರ್ಷಗಳಿಂದ ಕಾರ್ಯ ಪ್ರವೃತ್ತಿಯಲ್ಲಿರುತ್ತದೆ. ಈ ಸಂಸ್ಥೆಯಲ್ಲಿ ಹೊಸ ಪೀಳಿಗೆಯ ಮಕ್ಕಳು, ಯುವಕ-ಯುವತಿಯರು ಕರಾವಳಿಯ ಗಂಡು ಕಲೆಯಾದ ಯಕ್ಷಗಾನದ ಹೆಜ್ಜೆ ಗುರುತುಗಳನ್ನು ಕಲಿತು, ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಸಾರ್ಥಕತೆಯನ್ನು ಹೊಂದಿದ್ದಾರೆ. ಸಂಸ್ಥೆಯ ಪ್ರಾರಂಭದಲ್ಲಿ ಸುಮಾರು 15 ಮಂದಿ ಮಕ್ಕಳು, ಯುವಕರು, ದೊಡ್ಡವರು ಹೆಣ್ಣು-ಗಂಡು ಭೇದವಿಲ್ಲದೆ ಯಕ್ಷಗಾನದ ತಾಳ, ಹೆಜ್ಜೆಗಾರಿಕೆ, ಅರ್ಥಗಾರಿಕೆಯನ್ನು ಯೋಗ್ಯ ಗುರುಗಳಿಂದ ಅಭ್ಯಾಸ ಮಾಡಿದ್ದಾರೆ. ಯಕ್ಷಗಾನ ಪ್ರದರ್ಶನವನ್ನು ಉಡುಪಿ ಜಿಲ್ಲೆಯಲ್ಲಿ ಅಲ್ಲದೆ, ಹೊರಗಿನ ಮುಂಬಯಿ ಹಾಗೂ ಹಲವಾರು ಕಡೆಗಳಲ್ಲಿ ಯಶಸ್ವಿ ಪ್ರದರ್ಶನ ನೀಡಿರುವುದು ಈ ಸಂಸ್ಥೆಯ ಹೆಗ್ಗಳಿಕೆ. ಸತತ ಹತ್ತು ವರ್ಷಗಳ ಯಕ್ಷಗಾನ ಕಲಿಕೆಯೊಂದಿಗೆ ಈಗ ನಮ್ಮ ತಂಡದಲ್ಲಿ ಒಟ್ಟು 36 ಪ್ರಬುದ್ಧ ಕಲಾವಿದರು ಇದ್ದು ಯಾವುದೇ ಪ್ರಸಂಗವನ್ನು ಪ್ರದರ್ಶಿಸುವ ಅನುಭವ ಹೊಂದಿದ್ದಾರೆ.

ನಿರಂತರ ಚಟುವಟಿಕೆಯ ನಮ್ಮ ಹೆಮ್ಮೆಯ ಸಂಸ್ಥೆಯು ಈಗ ದಶಮಾನೋತ್ಸವ ವರ್ಷದ ಸಂಭ್ರಮದ ಆಚರಣೆಯ ಹೊಸ್ತಿಲಲ್ಲಿ ಬಂದು ನಿಂತಿದೆ. 2017ರ ಸೆಪ್ಟೆಂಬರ್ ತಿಂಗಳ ನವರಾತ್ರಿಯ ಪರ್ವಕಾಲದ ಅಷ್ಟಮಿ, ನವಮಿ ಮತ್ತು ದಶಮಿ ತಿಥಿ (28, 29 ಮತ್ತು 30) ಯಂದು ನಮ್ಮ ಕಲಾವಿದರ ಕೂಡುವಿಕೆಯೊಂದಿಗೆ ಯಕ್ಷಗಾನ ಪ್ರದರ್ಶನ ಮತ್ತು ಗುರುವಂದನೆ, ಕಲಾವಿದರಿಗೆ ಗೌರವಾರ್ಪಣೆ, ಸನ್ಮಾನದೊಂದಿಗೆ ಸಂಭ್ರಮದ ದಶಮಾನೋತ್ಸವವನ್ನು ಆಚರಿಸಬೇಕೆಂದು ನಿಶ್ಚಯಿಸಿರುತ್ತೇವೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಅಂದಾಜು 3ಲಕ್ಷ ರೂಪಾಯಿಯ ಆಯವ್ಯಯ ಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ.

ಕಲೆಯನ್ನು ಪೋಷಿಸುವ ಮತ್ತು ನಮ್ಮ ಮುಂದಿನ ಪೀಳಿಗೆಗೆ ನಿರಂತರ ಯಕ್ಷಗಾನದ ಬಗ್ಗೆ ಆಸಕ್ತಿ ಮೂಡಿಸುವ ಸದುದ್ದೇಶವನ್ನು ಹೊಂದಿರುವ ನಮ್ಮ ಈ ಕಲಾ ಸಂಸ್ಥೆಗೆ ನಿಮ್ಮ ವತಿಯಿಂದ ಹೆಚ್ಚಿನ ಧನ ಸಹಾಯವನ್ನು ನಿರೀಕ್ಷಿಸುತ್ತೇವೆ. ಕಲಾ ಪೋಷಕರಾದ ತಾವು ನಮ್ಮನ್ನು ಪ್ರೋತ್ಸಾಯಿಸಿ ಸಹಕರಿಸುತ್ತೀರಿ ಎಂಬ ಭರವಸೆ ನಮಗಿದೆ.

ಧನ ಸಹಾಯ ಮಾಡ ಬಯಸುವ ಕಲಾ ಪೋಷಕರು ಕರ್ಣಾಟಕ ಬ್ಯಾಂಕ್‌ನ ನಮ್ಮ ಸಂಸ್ಥೆಯ ಖಾತೆ ನಂ : 8032500102933501; IFSC Code KARB0000803, ಕುಂಜಿಬೆಟ್ಟು ಶಾಖೆ ಇಲ್ಲಿಗೆ ಪಾವತಿಸಬಹುದು ಅಥವಾ ನಮ್ಮನ್ನು ಭೇಟಿಯಾಗಿ ದೇಣಿಗೆ ನೀಡಿ ಸಹಕರಿಸಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ 9741785551 ಮತ್ತು 9448724161.

ಅಧ್ಯಕ್ಷರು ಮತ್ತು ಸರ್ವಸದಸ್ಯರು
ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು, ಕುಂಜಿಬೆಟ್ಟು, ಉಡುಪಿ

# ಎಂ.ಪಾಲಚಂದ್ರ ರಾವ್ ಮತ್ತು ಬಿ.ನಾರಾಯಣ ಇವರಿಗೆ ಗೌರವಾರ್ಪಣೆ

– ವೈ. ಮೋಹನ ರಾವ್





**ನ ಸಾ ಸಭಾ ಯತ್ರ ನ ಸಂತಿ ವೃದ್ಧಾಃ**
**ನ ತೇ ವೃದ್ಧಾ ಯೇ ನ ವದಂತಿ ಧರ್ಮಮ್ ।**

ಯಾವ ಸಭೆಯಲ್ಲಿ ಅನುಭವಸ್ಥ ವೃದ್ಧರು ಇಲ್ಲವೋ ಅದು ಸಭೆ ಎನ್ನಿಸದು. ಯಾರು ಧರ್ಮವನ್ನು ಉಪದೇಶ ಮಾಡುವುದಿಲ್ಲವೋ ಅವರು ವೃದ್ಧರು ಎನಿಸಿಕೊಳ್ಳುವುದಿಲ್ಲ. ಈ ಶ್ಲೋಕದಿಂದ ಹಿರಿಯರ ಮಹತ್ವ ತಿಳಿಯುತ್ತದೆ. ಹಿರಿಯರಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದವನ್ನು ಪಡೆಯುವುದು ನಮ್ಮ ಧರ್ಮ. ಆದ್ದರಿಂದ 71ನೇ ಸ್ವಾತಂತ್ರ್ಯೋತ್ಸವದ ದಿನದಂದು ನಮ್ಮ ಸಮಾಜದ ಇಬ್ಬರು ಹಿರಿಯರಿಗೆ ಗೌರವ ಸಲ್ಲಿಸುವ ಸಲುವಾಗಿ ಸಮಾನ ಮನಸ್ಕರ ತಂಡ ಸಿದ್ಧವಾಯಿತು. ಮೊದಲು, ಅಜ್ಜರಕಾಡಿನಲ್ಲಿರುವ ಶ್ರೀ. ಎಂ.ಪಾಲಚಂದ್ರ ರಾಯರ ಮನೆಗೆ ತೆರಳಿದೆವು. ಪಾಲಚಂದ್ರ ರಾಯರು ಮತ್ತು ಅವರ ಮನೆಯವರು ನಮ್ಮನ್ನೆಲ್ಲ ಆತ್ಮೀಯತೆಯಿಂದ ಸ್ವಾಗತಿಸಿದರು. ಅವರೊಡನೆ ಕ್ಷೇಮ ಸಮಚಾರ ಮತ್ತು ವರ್ತಮಾನ ವಿದ್ಯಮಾನಗಳನ್ನು ಮಾತಾಡಿಕೊಂಡೆವು. ಅವರು ಪ್ರೀತಿಯಿಂದ ನೀಡಿದ ಸಿಹಿ ತಿಂಡಿ ಮತ್ತು ಚಹಾ ಸ್ವೀಕರಿಸಿದೆವು. ನಾವು ನೀಡುವ ಸರಳವಾದ ಗೌರವ ಮತ್ತು ಸನ್ಮಾನವನ್ನು ಸ್ವೀಕರಿಸಬೇಕೆಂದು ಎಂ. ಪಾಲಚಂದ್ರ ರಾವ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಲಲಿತಾ ಅವರನ್ನು ಕೇಳಿಕೊಂಡೆವು.

ಶ್ರೀ ಎಚ್. ನಿರಂಜನ ರಾವ್ ಪಾಲಚಂದ್ರ ರಾವ್ ಇವರನ್ನು ಸಭೆಗೆ ಪರಿಚಯಿಸಿದ್ದರು. ಪಾಲಚಂದ್ರ ರಾಯರು ಸಾರ್ವಜನಿಕ ಕಾಮಗಾರಿ ವಿಭಾಗದಲ್ಲಿ ಪ್ರಾಮಾಣಿಕ ಮತ್ತು ಸ್ವಚ್ಛ ವ್ಯವಹಾರಗಳಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸಿದರು. ಮತ್ತು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ಹತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಕಾರ್ಯದರ್ಶಿಯಾಗಿ ಮತ್ತು ಅಧ್ಯಕ್ಷರಾಗಿ ಸಮಾಜ ಸಂಘಟನೆ ಮತ್ತು ಸಮಾಜ ಸೇವೆಯಲ್ಲಿ ಅಮೂಲ್ಯ ಸೇವೆ ಸಲ್ಲಿಸಿದರು ಎಂದು ತಿಳಿಸಿದರು. ಬಳಿಕ ಅವರನ್ನು ಗೌರವಿಸುವ ಹಾಗೂ ಸನ್ಮಾನಿಸುವ ಹೃದಯಸ್ಪರ್ಶಿ ಕಾರ್ಯಕ್ರಮ ಸಂಪನ್ನಗೊಂಡಿತು.

ಶ್ರೀ ಎಂ. ಪಾಲಚಂದ್ರ ರಾವ್ ಅವರ ತಲೆಗೆ "ಪೇಟಾ" ಇಟ್ಟು, ಮಲ್ಲಿಗೆ ಹೂ ಮಾಲೆಯನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನು ನೀಡಿ ಮತ್ತು ದೇವರ ಮೂರ್ತಿಯನ್ನು ನೀಡಿ ಬಹಳ ಚಂದದಿಂದ ನಮ್ಮವರು ಗೌರವಿಸಿ ಸನ್ಮಾನಿಸಿದರು. ಅವರ ಪತ್ನಿ ಶ್ರೀಮತಿ ಲಲಿತಾ ಅವರಿಗೆ ಕುಂಕುಮ ಮತ್ತು ಸೀರೆಯನ್ನಿತ್ತು ಗೌರವಿಸಿದರು. ಎಲ್ಲರೂ ದಂಪತಿಗಳಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದರು.

ನಿವೃತ್ತಿಯ ಪೂರ್ವದಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ವೇಳೆ ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿಯವರ ಸಹಯೋಗ ದೊರತದ್ದನ್ನು ಸ್ಮರಿಸಿಕೊಳ್ಳುತ್ತಾ ಪಾಲಚಂದ್ರರಾಯರು ಜನರ ಪ್ರೀತಿ, ವಿಶ್ವಾಸ, ಗೌರವಗಳಿಗಿಂತ ದೊಡ್ಡ ಆಸ್ತಿ ಬೇರೊಂದಿಲ್ಲ ಎಂದು ಅಭಿಪ್ರಾಯ ಪಟ್ಟರು. ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದಲ್ಲಿ ಕಾರ್ಯನಿರ್ವಹಿಸಿ ಏನಾದರೂ ಸಾಧಿಸಿದ್ದರೆ ಅದಕ್ಕೆ ಸಮಾಜ ಬಾಂಧವರ ಪ್ರೀತಿ. ವಿಶ್ವಾಸ ಹಾಗೂ ಸಮಾಜದ ಮೇಲಿರುವ ಅಭಿಮಾನವೇ ಕಾರಣ ಮತ್ತು ಶಿಸ್ತು, ಸ್ವಚ್ಛತೆ ಮತ್ತು ಸದುದ್ದೇಶ ಯಾವುದೇ ಸಂಘಟನೆಯಲ್ಲಿ ಅತೀ ಅಗತ್ಯ ಎಂದು ಅವರು ನುಡಿದರು ಮತ್ತು ಗೌರವಾರ್ಪಣೆ ಮಾಡಿದುದಕ್ಕೆ ಕೃತಜ್ಞತೆಯನ್ನು ಅರ್ಪಿಸಿದರು. ಮತ್ತೆ ನಾವು ಪಾಲಚಂದ್ರ ರಾಯರ ಮನೆಯಿಂದ ಬೈಲಕೆರೆ ನಾರಾಯಣ ರಾಯರ ಮನೆಗೆ ಬಂದೆವು.

ಶ್ರೀ ಬಿ. ನಾರಾಯಣ ರಾಯರು ಮತ್ತು ಅವರ ಪತ್ನಿ ಶ್ರೀಮತಿ ಅನಸೂಯ (ಅಹಲ್ಯ) ಹಾಗೂ ಅವರ ಮಗ ದಿನೇಶ್ (ನಮ್ಮೊಡನೆ ಪಾಲಚಂದ್ರ ರಾಯರ ಮನೆಗೆ ಗೌರವಾರ್ಪಣೆಗೆ ಬಂದಿದ್ದರು) ಎಲ್ಲರೂ ನಮ್ಮನ್ನು ಸ್ವಾಗತಿಸಿದರು. ಅಲ್ಲಿಯೂ ನಮಗೆ ಚಹಾ ಮತ್ತು ಸಿಹಿ ತಿಂಡಿಗಳನ್ನು ಸ್ವೀಕರಿಸುವ ಅವಕಾಶವನ್ನೊದಗಿಸಿದರು.

ಶ್ರೀ.ಎಚ್.ನಿರಂಜನ ರಾವ್ ಇವರು ಬಿ. ನಾರಾಯಣ ರಾಯರನ್ನು ಸಭೆಗೆ ಪರಿಚಯಿಸಿದರು. ಬಿ.ನಾರಾಯಣ ರಾಯರು ಭಾರತೀಯ ಜೀವ ವಿಮಾ ನಿಗಮದಲ್ಲಿ ಉದ್ಯೋಗಿಯಾಗಿ ಪ್ರಾಮಾಣಿಕತೆಯಿಂದ ಪಾಲಿಸಿದಾರರಿಗೆ ಸೇವೆ ನೀಡಿದರು ಮತ್ತು ಅಲ್ಲಿಗೆ ಬಂದ ಸಮಾಜದವರಿಗೆ ಮಾಹಿತಿ ನೀಡಿ ಸೇವಾ ಕಾರ್ಯವನ್ನು ಮಾಡಿದರು ಹಾಗೂ ಸ್ಥಾನಿಕ ದ್ರಾವಿದ ಬ್ರಾಹ್ಮಣ ಸಂಘದಲ್ಲಿ ಸದಸ್ಯರಾಗಿ ಮತ್ತು ಪದಾಧಿಕಾರಿಗಳಾಗಿ ಸಲಹೆ ಸೂಚನೆಗಳನ್ನಿತ್ತು ಸಮಾಜಮುಖಿಗಳಾಗಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು ಎಂದು ನಿರಂಜನ ರಾಯರು ಹೇಳಿದರು.

ಬಳಿಕ ಶ್ರೀ ಬಿ. ನಾರಾಯಣ ರಾಯರ ತಲೆಗೆ 'ಪೇಟಾ' ಇಟ್ಟು, ಮಲ್ಲಿಗೆ ಹೂ ಮಾಲೆಯನ್ನು ಹಾಕಿ, ಶಾಲು ಹೊದಿಸಿ, ಫಲಪುಷ್ಪಗಳನ್ನು ನೀಡಿ ಮತ್ತು ದೇವರ ಮೂರ್ತಿಯನ್ನು ನೀಡಿ ಅಚ್ಚುಕಟ್ಟಾಗಿ ನಮ್ಮವರು ಅವರನ್ನು ಗೌರವಿಸಿ ಸನ್ಮಾನಿಸಿದರು. ಅವರ ಪತ್ನಿ ಶ್ರೀಮತಿ ಅನಸೂಯ ಅವರಿಗೆ ಕುಂಕುಮ ಮತ್ತು ಸೀರೆಯನ್ನು ನೀಡಿ ಗೌರವಿಸಿದರು. ಎಲ್ಲರೂ ದಂಪತಿಗಳಿಗೆ ನಮಸ್ಕರಿಸಿ ಆಶೀರ್ವಾದವನ್ನು ಪಡೆದರು. ನಾನು ಎಲ್.ಐ.ಸಿಯಲ್ಲಿ ಉದ್ಯೋಗಿಯಾಗಿ ನನ್ನಿಂದ ಸಾಧ್ಯವಾದಷ್ಟು ಪಾಲಿಸಿದಾರರಿಗೆ ಪ್ರಾಮಾಣಿಕ ಸೇವೆಯನ್ನು ನೀಡಿದ್ದೇನೆ ಮತ್ತು ಸಂಘದಲ್ಲಿ ಸಮಾಜದವರಿಗೆ ಸೇವೆಯನ್ನು ವಿಸ್ತರಿಸಿ ಯಾವ ಪುರಸ್ಕಾರವನ್ನೂ ನಾನು ಬಯಸಿದವನಲ್ಲ. ಆದರೆ ನೀವೆಲ್ಲರೂ ಮನೆಗೆ ಬಂದು ಪ್ರೀತಿಯಿಂದ ನನ್ನನ್ನು ಗೌರವಿಸಿದ್ದೀರಿ. ಇದಕ್ಕೆ ಕೃತಜ್ಞತೆ ಎಂದು ಸನ್ಮಾನ ಸ್ವೀಕರಿಸುತ್ತಾ ಶ್ರೀ. ಬಿ.ನಾರಾಯಣ ರಾಯರು ಹೇಳಿದರು. ನಾವೇ ಧನ್ಯರು ಎಂದೆನುತ ನಾರಾಯಣ ರಾಯರ ಮನೆಯಿಂದ ನಮ್ಮ ನಮ್ಮ ಮನೆಗೆ ಹೊರಟೆವು.

ಈ ಕಾರ್ಯಕ್ರಮದ ನೇತೃತ್ವವನ್ನು ಶ್ರೀ ವಸಂತ ರಾವ್ ಕರಂಬಳ್ಳಿಯವರು ವಹಿಸಿದ್ದರು. ನಿರಂಜನ ರಾವ್ ಹೆರ್ಗ, ಎನ್.ಉದಯಚಂದ್ರ ರಾವ್, ಎನ್. ಉಮೇಶ್ ರಾವ್, ಎನ್. ಪ್ರವೀಣ್ ಕುಮಾರ್, ಮಹೇಶ ರಾವ್, ಬಿ.ದಿನೇಶ್, ಟಿ.ಜಗದೀಶ ರಾವ್, ಕರಂಬಳ್ಳಿ ವಿಕೇಶ ರಾವ್, ಕೃಷ್ಣಾನಂದ ರಾವ್, ಉಂಡಾರು, ಸುಬ್ರಹ್ಮಣ್ಯ ರಾವ್, ವೈ ಮೋಹನ್ ರಾವ್ ಮತ್ತು ಶ್ರೀ ಬಿ.ಎಸ್.ರಾವ್ ಮುಂತಾದವರು 'ಹಿರಿಯರಿಗೆ ಗೌರವಾರ್ಪಣೆ' ಯಶಸ್ವಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರೋತ್ಸಾಹಿಸಿದರು.

ಈ ಹಿಂದೆ 3 ವರ್ಷದಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಮುಂದೆ ಜನವರಿ 26 ಮತ್ತು ಆಗಸ್ಟ್ 15 – ಈ 2 ದಿನಗಳಲ್ಲಿ ಈ ಕಾರ್ಯಕ್ರಮ ಸಂಪನ್ನಗೊಳ್ಳಲಿದೆ.



**ನಿವೃತ್ತಿಯ ಸಂದರ್ಭದಲ್ಲಿ**
**ಶುಭಾಶಯಗಳು**



**ನಟ್ಟೋಜ ಸತೀಶ್ ರಾವ್, ಪೊಳಲಿ**

ಶುಭ ಕೋರುವ :
ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಬಂಧುಬಾಂಧವರು ಹಾಗೂ ಅಭಿಮಾನಿಗಳು


## ಚಿಣ್ಣರ ಅಂಗಳ



ಜ್ಞಾನೇಶ್, 8ನೇ ತರಗತಿ, ಮೂಡಬಿದ್ರಿ



ಕಾರ್ತಿಕೇಯ, 5ನೇ ತರಗತಿ, ಎಲ್ಲೂರು


**With Best Compliments From :**




9845084866, 9880742159, 9886199769 | info@landtrades.in | Ph: 0824 2425424
1st Floor, New Milagres Mansion, Falnir Road, Mangalore - 575001 | sales@landtrades.in | www.landtrades.in
CRISIL DA3+ CREDAI


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org